ಸಂಪಾದಕರು :
ಎಂ.ಎಸ್. ವಿಕಾಸ್

ಶನಿವಾರ, ಮೇ 20, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 06 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 2023

janathavani@mac.com
www.janathavani.com
08192 254736 91642 99999

# 2 ಸಾವಿರ ರೂ. ನೋಟುಗಳು ವಾಪಸ್



ಮುಂಬೈ, ಮೇ 19 – ಅಚ್ಚರಿಯ ಕ್ರಮ ತೆಗೆದುಕೊಂಡಿರುವ ರಿಸರ್ವ್ ಬ್ಯಾಂಕ್, 2 ಸಾವಿರ ರೂ.ಗಳ ನೋಟುಗಳನ್ನು ಚಲಾವಣೆಯಿಂದ ವಾಪಸ್ ಪಡೆದಿದೆ. ಸಾರ್ವಜನಿಕರು ಸೆಪ್ಟೆಂಬರ್ 30ರ ಒಳಗೆ ಈ ನೋಟುಗಳನ್ನು ಜಮಾ ಮಾಡುವಂತೆ ಇಲ್ಲವೇ ಬ್ಯಾಂಕುಗಳಲ್ಲಿ ವಿನಿಮಯ ಮಾಡಿಕೊಳ್ಳುವಂತೆ ಗಡುವು ನೀಡಲಾಗಿದೆ.

ಈ ಹಿಂದೆ 2016ರಲ್ಲಿ 500 ರೂ. ಹಾಗೂ 1,000 ರೂ.ಗಳ ನೋಟುಗಳನ್ನು ರಾತ್ರೋರಾತ್ರಿ ಅಮಾನ್ಯೀಕರಣ ಮಾಡಲಾಗಿತ್ತು. ಆದರೆ, ಈ ಬಾರಿ 2,000 ರೂ. ನೋಟುಗಳು ಸೆಪ್ಟೆಂಬರ್ 30ರವರೆಗೆ ಚಲಾವಣೆಯಲ್ಲಿರಲಿವೆ.

ಈ ಬಗ್ಗೆ ಹೇಳಿಕೆಯೊಂದನ್ನು ಬಿಡುಗಡೆ ಮಾಡಿರುವ ರಿಸರ್ವ್ ಬ್ಯಾಂಕ್, ಬ್ಯಾಂಕುಗಳು ತಕ್ಷಣದಿಂದ ಜಾರಿಗೆ ಬರುವಂತೆ 2,000 ರೂ.ಗಳ ನೋಟುಗಳನ್ನು ನೀಡುವಂತಿಲ್ಲ ಎಂದು ತಿಳಿಸಿದೆ.

ಒಂದು ಬಾರಿಗೆ ಗರಿಷ್ಠ 20,000 ರೂ.ಗಳನ್ನು ಮಾತ್ರ ಬ್ಯಾಂಕ್ ಮೂಲಕ ವಿನಿಮಯ ಮಾಡಿಕೊಳ್ಳಬಹುದಾಗಿದೆ. ಎರಡು ಸಾವಿರ ರೂ.ಗಳ ನೋಟುಗಳನ್ನು ಕಳ್ಳದಾಸ್ತಾನಿಗೆ ಬಳಸಲಾಗುತ್ತಿದೆ ಎಂಬ ಕಳವಳದ ನಡುವೆಯೇ ಈ ಕ್ರಮ ತೆಗದುಕೊಳ್ಳಲಾಗಿದೆ. 2018-19ರಿಂದಲೇ ರಿಸರ್ವ್ ಬ್ಯಾಂಕ್ 2,000 ರೂ.ಗಳ ನೋಟುಗಳ ಮುದ್ರಣ ನಿಲ್ಲಿಸಿದೆ. ಈ ನೋಟುಗಳ ಚಲಾವಣೆ ಇತ್ತೀಚೆಗೆ ಅಪರೂಪವಾಗಿದೆ.

ನವೆಂಬರ್ 2016ರಲ್ಲಿ ನೋಟು ಅಮಾನ್ಯೀಕರಣದ ಹಿನ್ನೆಲೆಯಲ್ಲಿ 2,000 ರೂ.ಗಳ ನೋಟುಗಳನ್ನು ಬಿಡುಗಡೆ ಮಾಡಲಾಗಿತ್ತು.

ಪ್ರಸಕ್ತ 2,000 ರೂ.ಗಳ ನೋಟುಗಳು ಹೆಚ್ಚು ಚಲಾವಣೆಯಲ್ಲಿ ಇಲ್ಲ. ಈಗ ಚಲಾವಣೆಯಲ್ಲಿರುವ ಇತರೆ ನೋಟುಗಳು ನಗದು ಹರಿವಿಗೆ ಸಾಕಷ್ಟಾಗಿದೆ ಎಂದು (2ನೇ ಪುಟಕ್ಕೆ)

**ಸೆಪ್ಟೆಂಬರ್ 30ರವರೆಗೆ 2,000 ರೂ. ನೋಟುಗಳಿಗೆ ಕಾನೂನು ಮಾನ್ಯತೆ**

**ಬ್ಯಾಂಕ್ ಹಾಗೂ ರಿಸರ್ವ್ ಬ್ಯಾಂಕ್‌ನ 19 ಪ್ರಾಂತೀಯ ಕಚೇರಿಗಳಲ್ಲಿ ನೋಟುಗಳ ಜಮಾ ಮಾಡಬಹುದು**

**ಮೇ 23ರಿಂದ ಒಂದು ಬಾರಿಗೆ ಗರಿಷ್ಠ 20,000 ರೂ. ವಿನಿಮಯಕ್ಕೆ ಅವಕಾಶ**

**ಖಾತೆದಾರರು ದಿನಕ್ಕೆ 4,000 ರೂ. ವಿನಿಮಯ ಮಾಡಿಕೊಳ್ಳಬಹುದು**

**ಕೆ.ವೈ.ಸಿ. ನಿಯಮಗಳು ಹಾಗೂ ಇತರೆ ನಿಯಮಗಳ ಅನ್ವಯ ನೋಟುಗಳನ್ನು ಖಾತೆಗಳಿಗೆ ಜಮಾ ಮಾಡಬಹುದು**

# ನಗರದಲ್ಲಿ ಸ್ಟಾರ್ಟ್‌ಅಪ್ ಪಾರ್ಕ್

**ವಿಟಿಯು ಕುಲಪತಿ ಡಾ. ವಿದ್ಯಾಶಂಕರ್**

ದಾವಣಗೆರೆ, ಮೇ 20 - ಇಂಜಿನಿಯರಿಂಗ್ ವಿದ್ಯಾರ್ಥಿಗಳ ಉದ್ಯಮಶೀಲತೆಗೆ ನೆರವಾಗಲು ದಾವಣಗೆರೆಯಲ್ಲಿ ಸ್ಟಾರ್ಟ್ ಅಪ್ ಪಾರ್ಕ್ ನಿರ್ಮಾಣಕ್ಕೆ ಚಿಂತನೆ ನಡೆಸಿರುವುದಾಗಿ ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿ ಡಾ. ವಿದ್ಯಾಶಂಕರ್ ಹೇಳಿದರು.

ಯು.ಬಿ.ಡಿ.ಟಿ. ಕಾಲೇಜು ಆವರಣದಲ್ಲಿ ಶುಕ್ರವಾರ ಸಂಜೆ ಹಮ್ಮಿಕೊಳ್ಳಲಾಗಿದ್ದ 'ಚೈತ್ರ-2023' ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿ ಗಳಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಇಂಜಿನಿಯರ್‌ಗಳು ಹೊಸ ಉದ್ಯಮಗಳನ್ನು ಆರಂಭಿಸಲು ಸ್ಟಾರ್ಟ್ ಅಪ್ ಪಾರ್ಕ್‌ನಲ್ಲಿ ಅಗತ್ಯ ನೆರವು ಸಿಗಲಿದೆ. ನಗರದ ನೂತನ ಕಾಲೇಜು (4ನೇ ಪುಟಕ್ಕೆ)

## ಬಂಗಾಳ ಕೊಲ್ಲಿ ತಲುಪಿದ ಮುಂಗಾರು ಮಾರುತ

ನವದೆಹಲಿ, ಮೇ 19 - ಮುಂಗಾರು ಮಾರುತಗಳು ಬಂಗಾಳ ಕೊಲ್ಲಿಯ ದಕ್ಷಿಣ ಭಾಗ, ನಿಕೋಬಾರ್ ದ್ವೀಪ ಹಾಗೂ ಅಂಡಮಾನ್ ಸಮುದ್ರದ ದಕ್ಷಿಣ ಭಾಗಕ್ಕೆ ತಲುಪಿವೆ. ಇದರೊಂದಿಗೆ ಮುಂಗಾರು ಮಳೆಯ ದಿನಗಳಿಗೆ ವೇದಿಕೆ (2ನೇ ಪುಟಕ್ಕೆ)

॥ ಶ್ರೀ ಗುರು ಕೊಟ್ಟೂರೇಶ್ವರ ಪ್ರಸನ್ನ ॥

## ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ



ಜನನ : 27.06.1945

ಮರಣ : 16.05.2023

ದಾವಣಗೆರೆ ವಾಸಿ ಶ್ರೀಮತಿ ಅಂದನೂರು ಜಯಮ್ಮ ಮುರುಗೆಪ್ಪ
ಆನಂದ ಟೆಕ್ಸ್‌ಟೈಲ್ಸ್ ಪ್ರೈ. ಲಿ., ಹಲಗೇರಿ ಜ್ಯೋತಿ ಗ್ಯಾಸ್ ಏಜೆನ್ಸಿ, ದಾವಣಗೆರೆ
ಇವರು ಮಾಡುವ ವಿಜ್ಞಾಪನೆಗಳು.
ದಿ. 16.05.2023ನೇ ಮಂಗಳವಾರ ರಾತ್ರಿ 10.30ಕ್ಕೆ ನನ್ನ ಮೈದುನನಾದ

**ಶ್ರೀ ಅಂದನೂರು ಬಸವರಾಜ್**

ಇವರು ಶಿವೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ ಕೈಲಾಸ ಸಮಾರಾಧನೆಯನ್ನು ದಿ. 20.05.2023ನೇ ಶನಿವಾರ ಮಧ್ಯಾಹ್ನ 12.00ಕ್ಕೆ ದಿ ದಾವಣಗೆರೆ-ಹರಿಹರ ಅರ್ಬನ್ ಸಹಕಾರಿ ಬ್ಯಾಂಕ್ ಸಮುದಾಯ ಭವನ, ಎಂಸಿಸಿ ಎ ಬ್ಲಾಕ್, ದಾವಣಗೆರೆಯಲ್ಲಿ ನಡೆಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು ;
ಮೃತರ ಮಗ ಅಂದನೂರು ಶಂಕರ್,
ಮೃತರ ಸೊಸೆಯಂದಿರಾದ ಶ್ರೀಮತಿ ಆಶಾ ಮತ್ತು ಶ್ರೀಮತಿ ಕವಿತಾ
ಹಾಗೂ ಮೊಮ್ಮಕ್ಕಳು, ಕುಟುಂಬದವರು ಹಾಗೂ ಅಂದನೂರು ಬಂಧು-ಮಿತ್ರರು.

ಅಂದನೂರು ಮುರುಗೆಪ್ಪ & ಬ್ರದರ್ಸ್
ಆನಂದ ಟೆಕ್ಸ್‌ಟೈಲ್ಸ್ ಪ್ರೈ. ಲಿ., ಜ್ಯೋತಿ ಗ್ಯಾಸ್ ಏಜೆನ್ಸಿ

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ

# ಪೂರ್ಣ ಪ್ರಮಾಣದಲ್ಲಿ ಸಂಪುಟ ರಚನೆ

## ಇಂದು 28 ಸಚಿವರು ಪ್ರಮಾಣ ವಚನ ಸ್ವೀಕಾರದ ಸಾಧ್ಯತೆ



**ಸಚಿವರ ಪಟ್ಟಿಯಲ್ಲಿ ದಾವಣಗೆರೆ ಜಿಲ್ಲೆಯಿಂದ ಎಸ್.ಎಸ್. ಮಲ್ಲಿಕಾರ್ಜುನ್ ಹೆಸರು**

ಬೆಂಗಳೂರು, ಮೇ 19 - ವಿಧಾನಸಭಾ ಚುನಾವಣೆ ಗೂ ಮುನ್ನ ಜನತೆಗೆ ನೀಡಿ ರುವ ಗ್ಯಾರಂಟಿ ಯೋಜನೆ ಗಳನ್ನು ಅನು ಷ್ಠಾನಗೊಳಿಸುವುದು, ಲೋಕಸಭಾ ಚುನಾವಣೆ ವೇಳೆಗೆ ಸರ್ಕಾರ ಜನಪರವಾಗಿದೆ ಎಂಬುದನ್ನು ಸಾಬೀತು ಪಡಿಸಲು ನಿಯೋಜಿತ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಪೂರ್ಣ ಪ್ರಮಾಣದಲ್ಲಿ ಸಂಪುಟ ರಚಿಸುತ್ತಿದ್ದಾರೆ.

ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ ಅವರ ಸಲಹೆಯಂತೆ ತಾವು ಹಾಗೂ ಉಪ ಮುಖ್ಯಮಂತ್ರಿ ಸ್ಥಾನಕ್ಕೆ ನಿಯೋಜಿತರಾಗಿರುವ ಡಿ.ಕೆ.ಶಿವಕುಮಾರ್ ಅವರಲ್ಲದೆ, 28 ಮಂದಿ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

4 ಸ್ಥಾನಗಳನ್ನು ಖಾಲಿ ಉಳಿಸಿಕೊಂಡು ಉಳಿದಂತೆ ಸಂಪುಟದಲ್ಲಿ ಪ್ರಾದೇಶಿಕತೆ, ಜಾತಿ ಸೇರಿದಂತೆ ಎಲ್ಲಾ ರೀತಿಯಲ್ಲೂ ಪ್ರಾತಿನಿಧ್ಯ ಕಲ್ಪಿಸಿ ಸಂಪುಟ ರಚನೆ ಮಾಡಲಾಗುತ್ತಿದೆ.

ಮಂತ್ರಿಮಂಡಲ ರಚನೆಗೆಂದು ದೆಹಲಿಗೆ ಅಲೆಯುವುದು ಬೇಡ. ಅಧಿಕಾರ ವಹಿಸಿಕೊಂಡ ತಕ್ಷಣ ಜನರ ಕೆಲಸ ಮಾಡಿ. ನಿಮಗೆ ಏನು ಮಾರ್ಗ ದರ್ಶನದ ಅವಶ್ಯಕತೆ ಇದೆಯೋ ಅದನ್ನು ಒಮ್ಮೆಲೇ ಪಡೆದುಕೊಂಡು ಹೋಗಿ ಎಂದು ಸಿದ್ಧರಾಮಯ್ಯ ಹಾಗೂ ಶಿವಕುಮಾರ್‌ಗೆ ಕಿವಿಮಾತು ಹೇಳಿದ್ದಾರೆ.

ರಾಹುಲ್ ಸಲಹೆಯಂತೆ ದೆಹಲಿಗೆ ವಿಶೇಷ ವಿಮಾನದಲ್ಲಿ ತೆರಳಿದ ಉಭಯ ನಾಯಕರು ಇಂದು ಇಡೀ ದಿನ ವರಿಷ್ಠರೊಂದಿಗೆ ಸಮಾಲೋಚಿಸಿ, ಮಂತ್ರಿ ಮಂಡಲ ಸೇರುವ ಶಾಸಕರ ಪಟ್ಟಿಯೊಂದಿಗೆ ಹಿಂದಿರುಗಿದ್ದಾರೆ.

ಶನಿವಾರ ಬೆಳಿಗ್ಗೆ 12;30 ಕ್ಕೆ ಪ್ರಮಾಣ ವಚನ ಸಮಾರಂಭ ನಡೆಯಲಿದ್ದು, ಮುಖ್ಯಮಂತ್ರಿ, ಉಪಮುಖ್ಯಮಂತ್ರಿಗಳ ಬಳಿಕ ನೂತನ ಸಚಿವರು ಅಧಿಕಾರ ಹಾಗೂ ಗೌಪ್ಯತೆಯ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

ಶನಿವಾರ ಸಿದ್ಧರಾಮಯ್ಯ ಅವರ ಸಂಪುಟಕ್ಕೆ ಸೇರಲಿರುವ ಸಂಭಾವ್ಯ ಸಚಿವರ ಪಟ್ಟಿ ಇಂತಿದೆ : ಎಸ್.ಎಸ್.ಮಲ್ಲಿಕಾರ್ಜುನ್ - ದಾವಣಗೆರೆ, ಡಾ.ಜಿ.ಪರಮೇಶ್ವರ್ - ತುಮಕೂರು, ಬಿ.ಕೆ.ಹರಿಪ್ರಸಾದ್ - ದಕ್ಷಿಣ ಕನ್ನಡ, ಎಂ.ಬಿ.ಪಾಟೀಲ್ - (4ನೇ ಪುಟಕ್ಕೆ)

## ಒಳಮೀಸಲಾತಿ : ಸಾರ್ವಜನಿಕ ಹಿತಾಸಕ್ತಿ ಅರ್ಜಿ

ಬೆಂಗಳೂರು, ಮೇ 19 - ನಿರ್ಗಮಿತ ಬಿಜೆಪಿ ಸರ್ಕಾರ ಪರಿಶಿಷ್ಟ ಜಾತಿ ಸಮುದಾಯಕ್ಕೆ ನೀಡಿದ್ದ ಒಳ ಮೀಸಲಾತಿ ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಲಾಗಿದೆ. ಅರ್ಜಿಯ (2ನೇ ಪುಟಕ್ಕೆ)



## 24th Year Memory

In ever loving Memory of
**Sri B.K.G. Lakshman Setty**
who left us on 20.5.1999



B.K.G. Lakshman Setty
24.3.1920 - 20.5.1999
9/2971, 'Sri' Nivas' 6th Main,
MCC'B' Block, Opp.
Swimming Pool, Davangere-4

Daughters and Son's In-Law
Smt. Geetha S.V. Srinivasulu, Hospet
Smt. Dr. Sunitha & Sri T.V. Sushil Kumar, Lincolnshire, U.K.
Smt. Sadhana & Sri Nagendra Prasad, Mysore
Smt. Dr. Vandana & Sri Dr. Rajendra Desai, Davangere.
Smt. Lakshmi & Sri Sreeram, Sydney, Australlia
Grand Children :
Sindhu, Santosh, Sripal, Teju, Shantanu And Pooja

## ಮೂರನೇ ವರ್ಷದ ಪುಣ್ಯಸ್ಮರಣೆ



ಜನನ :15-01-1962

ಮರಣ:20-05-2020

**ಲಿಂ॥ ಶ್ರೀ ಮೆಳ್ಳೆಕಟ್ಟೆ ಚಿದಾನಂದ ಐಗೂರು**

(ಮಾಜಿ ಜಿಲ್ಲಾ ಪಂಚಾಯತ್ ಅಧ್ಯಕ್ಷರು, ದಾವಣಗೆರೆ)

ಅಪ್ಪ ನೀಡಿದ ಜನ್ಮ - ಅಪ್ಪ ನೀಡಿದ ಪ್ರೀತಿ,
ಅಪ್ಪ ನೀಡಿದ ವಿದ್ಯೆ - ಅಪ್ಪ ನೀಡಿದ ಬದುಕು,
ಇವೆಲ್ಲವೂ ಬೆಲೆ ಕಟ್ಟಲಾಗದ್ದು.
ಅಪ್ಪಾಜಿ ಎಂದಿಗೂ ನೆನಪಿನಲ್ಲಿರುವವರು
3 ವರ್ಷದ ಹಿಂದೆ ಅಪ್ಪಾಜಿಯನ್ನು ಕಳೆದುಕೊಂಡ
ಈ ದಿನದಂದು ನಿಮಗೊಂದು ಭಾವಪೂರ್ಣ ನಮನ

ಪತ್ನಿ : ಶ್ರೀಮತಿ ಲತಾ ಚಿದಾನಂದ
ಮಕ್ಕಳು : ಶ್ರೀಮತಿ ತೇಜಸ್ವಿನಿ, ಅಳಿಯ: ಶ್ರೀ ವೈ.ಎಸ್.ಭರತ್, ಮೊಮ್ಮಗಳು: ಆರ್ನ್ಯ
ಕು॥ ಯಶಸ್ವಿನಿ ಸಿ.ಎಂ., ಕು॥ ಚಿನ್ಮಯಿ ಸಿ.ಎಂ.
ಕಲ್ಲೇಶ್ವರ ಕಾಂಕ್ರೀಟ್ ಪ್ರಾಡಕ್ಟ್ಸ್, ಯಶಸ್ವಿನಿ ಕಾಂಕ್ರೀಟ್ ಪ್ರಾಡಕ್ಟ್ಸ್
ಹಾಗೂ ಮೆಳ್ಳೆಕಟ್ಟೆ ಮತ್ತು ಐಗೂರು ಗ್ರಾಮಸ್ಥರು



# 23 ರಿಂದ ದ್ವಿತೀಯ ಪಿಯುಸಿ ಪೂರಕ ಪರೀಕ್ಷೆ



ದಾವಣಗೆರೆ, ಮೇ 19- ಜಿಲ್ಲೆಯಲ್ಲಿ ಇದೇ ದಿನಾಂಕ 23 ರಿಂದ ಬರುವ ಜೂನ್ 3 ವರೆಗೆ ದ್ವಿತೀಯ ಪಿಯುಸಿ ಪೂರಕ ಪರೀಕ್ಷೆಗಳು 8 ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿವೆ ಎಂದು ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್ ತಿಳಿಸಿದ್ದಾರೆ.

ಶುಕ್ರವಾರ ಜಿಲ್ಲಾಡಳಿತ ಭವನದ ಅಪರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಪಿಯುಸಿ ಪೂರಕ ಪರೀಕ್ಷೆಯ ಪೂರ್ವ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಈಗಾಗಲೇ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯು ಪೂರಕ ಪರೀಕ್ಷೆಯ ದಿನಾಂಕವನ್ನು ಬಿಡುಗಡೆ ಮಾಡಿದ್ದು, ದಾವಣಗೆರೆಯ 4 ಕೇಂದ್ರಗಳಲ್ಲಿ 2224 ವಿದ್ಯಾರ್ಥಿಗಳು, ಹರಿಹರ-597. ಚನ್ನಗಿರಿ-609, ಜಗಳೂರು-603, ಹೊನ್ನಾಳಿ-468 ತಲಾ ಒಂದು ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ಬರೆಯಲಿದ್ದು, ಒಟ್ಟು 4501 ವಿದ್ಯಾರ್ಥಿಗಳು ಪೂರಕ ಪರೀಕ್ಷೆ ಬರೆಯಲಿದ್ದಾರೆ.

ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷಾ ಸಂಬಂಧಿ ಅಕ್ರಮ ಚಟುವಟಿಕೆ ನಡೆಯದಂತೆ ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು. ಯಾವುದೇ ರೀತಿಯ ಅಹಿತಕರ ಘಟನೆಗಳು ಸಂಭವಿಸಿದಲ್ಲಿ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು. ಪರೀಕ್ಷಾ ಕಾರ್ಯದಲ್ಲಿ ಭಾಗವಹಿಸುವ ಸಿಬ್ಬಂದಿಗಳಿಗೆ ಗುರುತಿನ ಚೀಟಿ ನೀಡಲಾಗುತ್ತದೆ. ಪರೀಕ್ಷಾ ಸಮಯದಲ್ಲಿ ಕಡ್ಡಾಯವಾಗಿ ಪ್ರದರ್ಶಿಸಲು ಕ್ರಮ ವಹಿಸಬೇಕು.

ಜಿಲ್ಲಾ ಮಟ್ಟದಲ್ಲಿ ಒಂದು ಜಾಗೃತ ದಳವನ್ನು ನೇಮಿಸಲಾಗಿದ್ದು, ಪರೀಕ್ಷಾ ಕಾರ್ಯನಿರತ ಉಪನ್ಯಾಸಕರು, ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳು ಮೊಬೈಲ್, ಲ್ಯಾಪ್‌ಟಾಪ್, ಇ-ಕ್ಯಾಮರಾ ಇತ್ಯಾದಿ ಎಲೆಕ್ಟ್ರಾನಿಕ್ಸ್ ಉಪಕರಣಗಳನ್ನು ಪರೀಕ್ಷಾ ಕೇಂದ್ರಕ್ಕೆ ತರುವುದನ್ನು ನಿಷೇಧಿಸಲಾಗಿದೆ ಹಾಗೂ ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರು, ಪರೀಕ್ಷಾರ್ಥಿಗಳನ್ನು ನೆಲದ ಮೇಲೆ ಕೂರಿಸಿ ಪರೀಕ್ಷೆ ಬರೆಸದೇ ಪೀಠೋಪಕರಣಗಳನ್ನು ಅಳವಡಿಸಬೇಕು.

ಪೂರಕ ಪರೀಕ್ಷೆಗೆ ವಿದ್ಯಾರ್ಥಿಗಳು ಎಂದಿನಂತೆ ಪರೀಕ್ಷೆ ಹಾಲ್ ಟಿಕೆಟ್ ಅನ್ನು ತಮ್ಮ ಕಾಲೇಜುಗಳಿಂದ ಪಡೆದು, ಕಡ್ಡಾಯವಾಗಿ ತೆಗೆದುಕೊಂಡು ಪರೀಕ್ಷಾ ಕೇಂದ್ರಕ್ಕೆ ತೆಗೆದುಕೊಂಡು ಹೋಗಬೇಕು. ಪ್ರವೇಶ ಪತ್ರವಿಲ್ಲದೆ ಪರೀಕ್ಷೆಗೆ ಕೂರಲು ಅವಕಾಶವಿರುವುದಿಲ್ಲ. ಹಾಗೆಯೇ ಪ್ರವೇಶ ಪತ್ರದಲ್ಲಿ ನೀಡಲಾದ ಸೂಚನೆಗಳನ್ನು ಪಾಲಿಸುವುದು ಕಡ್ಡಾಯವಾಗಿರುತ್ತದೆ.

ಜಿಲ್ಲೆಯ 8 ಪರೀಕ್ಷಾ ಕೇಂದ್ರಗಳಿಗೆ ಪರೀಕ್ಷೆ ಮುಗಿಯುವವರೆಗೆ ಪ್ರತಿದಿನ ಪೊಲೀಸ್ ಬಂದೋಬಸ್ತ್ ಮಾಡುವ ಬಗ್ಗೆ ಹಾಗೂ ಪರೀಕ್ಷಾ ಕೇಂದ್ರದ ಸುತ್ತಮುತ್ತ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಯಲ್ಲಿರುತ್ತದೆ ಹಾಗೂ ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿನ ಜೆರಾಕ್ಸ್ ಅಂಗಡಿಗಳನ್ನು ಮುಚ್ಚುವಂತೆ ಕ್ರಮ ಕೈಗೊಳ್ಳಲು ಕ್ರಮ ತಿಳಿಸಿದರು.

ಸಭೆಯಲ್ಲಿ ಡಿ.ಡಿ.ಪಿ.ಐ. ತಿಪ್ಪೇಶಪ್ಪ, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಉಪಸ್ಥಿತರಿದ್ದರು.

## ರೈಲು ಅಪಘಾತವಲ್ಲ ... !



ಹರಿಹರ, ಮೇ 19- ರೈಲುಗಳ ಅಪಘಾತ ಸಂಭವಿಸಿದ ಸಂದರ್ಭದಲ್ಲಿ ಪ್ರಯಾಣಿಕರ ಸುರಕ್ಷತೆ, ರಕ್ಷಣೆ ಬಗ್ಗೆ ಇಲ್ಲಿನ ರೈಲ್ವೇ ನಿಲ್ದಾಣದಲ್ಲಿ ಅಣಕು ಪ್ರದರ್ಶನ ನಡೆಸಲಾಯಿತು. ಮೈಸೂರು ವಿಭಾಗ ರೈಲ್ವೆ ವತಿಯಿಂದ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ ಮತ್ತು ರಾಜ್ಯ ಸರ್ಕಾರದ ಸಂಸ್ಥೆಗಳ ಸಹಯೋಗದೊಂದಿಗೆ ಈ ಕಾರ್ಯಕ್ರಮ ನಡೆಯಿತು. ರೈಲ್ವೆ ಇಲಾಖೆ ಅಧಿಕಾರಿಗಳಾದ ಅಲೋಕ್ ತಿವಾರಿ, ದೀರಜ್ ಭೂಪೇನ್, ವಿಜಯ ಮೈಸೂರು, ಉಮೇಶ್ ನಾಯ್ಕ್, ಡಾ ರಾಘವೇಂದ್ರ ದುರುಗೋಜಿ ಇತರರು ಈ ಸಂದರ್ಭದಲ್ಲಿದ್ದರು.

## ವಿಶ್ವಾರಾಧ್ಯ ಆಸ್ಪತ್ರೆಯಲ್ಲಿ ಇಂದು ಕ್ಯಾನ್ಸರ್ ತಪಾಸಣಾ ಶಿಬಿರ

ಬಾಡಾ ಕ್ರಾಸ್ ಬಳಿ ಇರುವ ವಿಶ್ವಾರಾಧ್ಯ ಕ್ಯಾನ್ಸರ್ ಆಸ್ಪತ್ರೆಯಲ್ಲಿ ಇಂದು ಬೆಳಿಗ್ಗೆ 9 ರಿಂದ ಮಧ್ಯಾಹ್ನ 3 ರವರೆಗೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ನಡೆಯಲಿದೆ ಎಂದು ಕ್ಯಾನ್ಸರ್ ಸರ್ಜನ್ ಡಾ. ಜಗದೀಶ್ ತುಬಚಿ ತಿಳಿಸಿದ್ದಾರೆ.ವಿವರಕ್ಕೆ ಸಂಪರ್ಕಿಸುವ ಮೊಬೈಲ್ ಸಂಖ್ಯೆ : 9742455516, 9480696842.

## ಡೆಂಗ್ಯೂ ದಿನಾಚರಣೆ : ಚಳ್ಳಕೆರೆಯಲ್ಲಿ ಜಾಥಾ



ಚಳ್ಳಕೆರೆ, ಮೇ 19- ಇಲ್ಲಿನ ತಾಲ್ಲೂಕು ಆರೋಗ್ಯಾಧಿಕಾರಿಗಳ ಕಛೇರಿಯಲ್ಲಿ ಡೆಂಗ್ಯೂ ದಿನಾಚರಣೆ ಪ್ರಯುಕ್ತ ಜಾಥಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ತಾಲ್ಲೂಕು ದಂಡಾಧಿಕಾರಿ ರೆಹಾನ್ ಪಾಷಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಡೆಂಗ್ಯೂ ರೋಗ ನಿಯಂತ್ರಣಕ್ಕೆ ಮುಂಜಾಗ್ರತಾ ಕ್ರಮಗಳಾದ ದಿನಬಳಕೆಗಾಗಿ ಸಂಗ್ರಹಿಸಿದ ನೀರನ್ನು ಯಾವಾಗಲೂ ಮುಚ್ಚಿಡಬೇಕು. ಬೇಸಿಗೆ ಕಾಲ ಹಾಗೂ ಮಳೆಗಾಲದ ಸಮಯದಲ್ಲಿ ಡೆಂಗ್ಯೂ ಪ್ರಕರಣಗಳು ಉಲ್ಬಣವಾಗುತ್ತವೆ. ಡೆಂಗ್ಯೂ ತಡೆಗಟ್ಟಬಹುದಾದ ಕಾಯಿಲೆಯಾಗಿದ್ದು, ಭಯ ಬೀಳುವ ಅವ್ಯಶಕತೆಯಿಲ್ಲ ಎಂದರು ತಿಳಿಸಿದರು.

ಈ ಸಂದರ್ಭದಲ್ಲಿ ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಕಾಶಿ, ಡಾ. ಶ್ರೀನಿವಾಸ್, ಡಾ. ಮೇಘನಾ ತಿಪ್ಪೇಸ್ವಾಮಿ, ಬಿಹೆಚ್‌ಇಓ ತಾಲ್ಲೂಕು ಆರೋಗ್ಯಾಧಿಕಾರಿಗಳು, ಕಛೇರಿ ಸಿಬ್ಬಂದಿಗಳು, ಜಯಣ್ಣ ನರ್ಸಿಂಗ್ ಕಾಲೇಜು ವಿದ್ಯಾರ್ಥಿಗಳು, ಉಪನ್ಯಾಸಕರು ಭಾಗವಹಿಸಿದ್ದರು.

## ನಗರದಲ್ಲಿ ಇಂದು ಅನ್ನ ಸಂತರ್ಪಣೆ

ದಾವಣಗೆರೆ, ಮೇ 19 - ಶಾಮನೂರು ಶಿವಶಂಕರಪ್ಪ, ಎಸ್.ಎಸ್. ಮಲ್ಲಿಕಾರ್ಜುನ್ ಗಳಿಸಿರುವ ಗೆಲುವು ಹಾಗೂ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಪ್ರಮಾಣ ವಚನ ಸ್ವೀಕರಿಸುತ್ತಿರುವ ಹಿನ್ನೆಲೆಯಲ್ಲಿ ನಗರದಲ್ಲಿ ನಾಳೆ ಶನಿವಾರ ಅನ್ನ ಸಂತರ್ಪಣೆ ಆಯೋಜಿಸಲಾಗಿದೆ ಎಂದು ಉಪ್ಪಾರ ಸಮಾಜದ ಮುಖಂಡ ಕೆ.ಎ. ಪಾಪಣ್ಣ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಕಾಂಗ್ರೆಸ್ ಮುಖಂಡರಾದ ಪರಶುರಾಮಪ್ಪ ಪೂಜಾರ್, ಶೇಖರಪ್ಪ ನಗರದ ಎ ಬ್ಲಾಕ್‌ನ ಆರ್.ಎಂ.ಸಿ. ರಸ್ತೆಯಲ್ಲಿ ಮಧ್ಯಾಹ್ನ 12 ಗಂಟೆಗೆ ಅನ್ನ ಸಂತರ್ಪಣೆ ನಡೆಯಲಿದೆ. ಎಸ್.ಎಸ್. ಕೇರ್‌ನ ಟ್ರಸ್ಟಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮುಖಂಡರಾದ ಎಲ್. ವೀರೇಶ್, ತಿಮ್ಮೇಶ್ ನಾಯಕ್, ಹೆಚ್.ಬಿ. ಪ್ರಭುಲಿಂಗಪ್ಪ, ಅಬ್ದುಲ್ ಸಾಬ್, ಡಿ.ಬಿ. ಲಿಂಗರಾಜ್ ಮತ್ತಿತರರು ಉಪಸ್ಥಿತರಿದ್ದರು.

## ಅದಾನಿ ಷೇರುಗಳ ತಲ್ಲಣದಲ್ಲಿ ನಿಯಂತ್ರಕದ ವೈಫಲ್ಯ ಪತ್ತೆ ಮಾಡಲಾಗದು

### ಸುಪ್ರೀಂ ಕೋರ್ಟ್ ಸಮಿತಿಯ ವರದಿ

ನವದೆಹಲಿ, ಮೇ 19 - ಅದಾನಿ ಸಮೂಹದ ಷೇರುಗಳ ಏರಿಳಿತದಲ್ಲಿ ನಿಯಂತ್ರಕದ ವೈಫಲ್ಯ ಇದೆಯೇ ಎಂಬುದನ್ನು ಕಂಡು ಹಿಡಿಯಲು ಸಾಧ್ಯವಾಗದು ಎಂದು ಸುಪ್ರೀಂ ಕೋರ್ಟ್‌ನಿಂದ ನೇಮಕವಾದ ಆರು ಸದಸ್ಯರ ಪರಿಣಿತರ ಸಮಿತಿ ತಿಳಿಸಿದೆ.

ಅಮೆರಿಕದ ಹಿಂಡನ್‌ಬರ್ಗ್ ರೀಸರ್ಚ್ ಸಂಸ್ಥೆಯ ವರದಿಯ ನಂತರ ಅದಾನಿ ಸಮೂಹದ ಷೇರುಗಳಲ್ಲಿ ತೀವ್ರ ಕುಸಿತವಾಗಿತ್ತು. ನಂತರ ಈ ಬಗ್ಗೆ ಪರಿಶೀಲಿಸಲು ಸುಪ್ರೀಂ ಕೋರ್ಟ್ ಪರಿಣಿತರ ಸಮಿತಿಯೊಂದನ್ನು ರಚಿಸಿತ್ತು.

ಸಮಿತಿಯು ತನ್ನ ವರದಿ ಸಲ್ಲಿಸಿದ್ದು, ಜನವರಿ 24ರಂದು ಹಿಂಡನ್‌ಬರ್ಗ್ ವರದಿ ಬಂದ ನಂತರ ಇಡೀ ಷೇರು ಪೇಟೆಯಲ್ಲೇನೂ ಏರಿಳಿತವಾಗಿಲ್ಲ ಎಂದು ಹೇಳಿದೆ.

ಅಲ್ಲದೇ, ಅದಾನಿ ಸಮೂಹದ ಷೇರುಗಳನ್ನು ತಿರುಚಿರುವುದೂ ಕಂಡು ಬಂದಿಲ್ಲ ಎಂದು ಮಾರುಕಟ್ಟೆ ನಿಯಂತ್ರಕ ಸೆಬಿ ತಿಳಿಸಿದೆ. ಅದಾನಿ ಸಮೂಹದ ಷೇರುಗಳಲ್ಲಿ ಏರಿಳಿತ ಹೆಚ್ಚಾಗಿದ್ದಕ್ಕೆ ಹಿಂಡನ್‌ಬರ್ಗ್ ವರದಿ ಹಾಗೂ ಅದರ ಪರಿಣಾಮಗಳು ಕಾರಣ ಎಂದು ಸಮಿತಿ ಹೇಳಿದೆ.

ಅದಾನಿ ಸಮೂಹದ ಷೇರುಗಳ ಬೆಲೆ ಅದಕ್ಕೂ ಮುಂಚೆ ತೀವ್ರ ಏರಿಕೆಯಾಗಿದ್ದಕ್ಕೆ ಒಂದೇ ಸಂಸ್ಥೆ ಇಲ್ಲವೇ ಸಮೂಹ ಕಾರಣ ಎಂದು ಹೇಳಲಾಗದು ಎಂದು ಸಮಿತಿ ಹೇಳಿದೆ.

ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎ.ಎಂ. ಸಪ್ರೆ ಅವರ ನೇತೃತ್ವದಲ್ಲಿ ಸಮಿತಿ ರಚಿಸಲಾಗಿತ್ತು.

## ಹೊನ್ನಾಳಿಯಲ್ಲಿ ಇಂದು ಬೆಸ್ಕಾಂ ಅದಾಲತ್

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಬೆಸ್ಕಾಂ) ಹೊನ್ನಾಳಿ ಉಪವಿಭಾಗದ ಆವರಣದಲ್ಲಿ ಇಂದು ಮಧ್ಯಾಹ್ನ 3ರಿಂದ 5.30 ರವರೆಗೆ ಗ್ರಾಹಕರ ಸಭೆ ನಡೆಯಲಿದೆ. ಸದರಿ ಸಭೆಗೆ ಗ್ರಾಹಕರು ತಮ್ಮ ಸ್ಥಾವರಕ್ಕೆ ಸಂಬಂಧಿಸಿದಂತೆ ಕುಂದು ಕೊರತೆಗಳಿಗೆ ಲಿಖಿತ ದೂರು ನೀಡಿ, ಪರಿಹಾರವನ್ನು ಕಂಡುಕೊಳ್ಳಬಹುದಾಗಿದೆ ಎಂದು ಹೊನ್ನಾಳಿ ಬೆಸ್ಕಾಂ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಬಿ.ಕೆ. ಶ್ರೀನಿವಾಸ್ ತಿಳಿಸಿದ್ದಾರೆ.

## ಜವಾಹರ್ ಬಾಲ್ ಮಂಚ್‌ನಿಂದ ಪ್ರಾರ್ಥನೆ



ದಾವಣಗೆರೆ, ಮೇ 19- ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಅಭೂತಪೂರ್ವ ಗೆಲುವು ಸಾಧಿಸಿ, ಹೊಸ ಸರ್ಕಾರ ಅಸ್ತಿತ್ವಕ್ಕೆ ಬರುತ್ತಿರುವ ಹಿನ್ನೆಲೆಯಲ್ಲಿ ನಗರದ ಜಿಲ್ಲಾ ಜವಾಹರ್ ಬಾಲ್ ಮಂಚ್ ಹಾಗೂ ಕಾರ್ಯಕರ್ತರಿಂದ ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ ದೇವಸ್ಥಾನ ಹಾಗೂ ಖಿಡಕ್ ಷಾ ವಲಿ ದರ್ಗಾದಲ್ಲಿ ವಿಶೇಷ ಪೂಜೆ ಹಾಗೂ ಪ್ರಾರ್ಥನೆ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾ ಅಧ್ಯಕ್ಷ ಮೊಹಮ್ಮದ್ ಜಿಕ್ರಿಯಾ, ನಗರದಲ್ಲಿ ನಡೆದ ಐತಿಹಾಸಿಕ ಸಿದ್ದರಾಮೋತ್ಸವದ ಮೂಲಕ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೇರಲು ಕಾರಣವಾಗಿದ್ದು, ಈ ನಿಟ್ಟಿನಲ್ಲಿ ಮಧ್ಯ ಕರ್ನಾಟಕದಲ್ಲಿ ಅತಿ ಹೆಚ್ಚು ಸ್ಥಾನ ಗಳಿಸಲು ಶ್ರಮವಹಿಸಿದ ಶಾಮನೂರು ಶಿವಶಂಕರಪ್ಪ ಅಥವಾ ಎಸ್.ಎಸ್.ಮಲ್ಲಿಕಾರ್ಜುನ್ ಅವರಿಗೆ ಪ್ರಭಾವಿ ಖಾತೆಗಳನ್ನು ನೀಡಿ ಇನ್ನೂ ಹೆಚ್ಚಿನ ಸೇವೆ ಮಾಡಲು ಅವಕಾಶ ನೀಡಬೇಕೆಂದು ಮನವಿ ಮಾಡಿದರು.

ಹಿರಿಯ ಮುಖಂಡ ರಾಜು ಭಂಡಾರಿ, ಕಿಸಾನ್ ಕಾಂಗ್ರೆಸ್ ಮುಖಂಡರಾದ ಹಾಲೇಶ್, ಎಂ.ಮಂಜು ಸ್ವಾಮಿ ಕತ್ತಲಗೇರಿ, ಸುರೇಶ್ ಎಂ.ಜಾಧವ್, ಹರೀಶ್ ಹಾಲೇಶ್, ಶಿಲ್ಪ ಪರಶುರಾಮ್, ಪ್ರೇಮಾ, ರಿಯಾಜು ದ್ದೀನ್, ಧನಂಜಯ್, ಮತ್ತಿತರರು ಭಾಗವಹಿಸಿದ್ದರು.

## ಒಳಮೀಸಲಾತಿ : ಹಿತಾಸಕ್ತಿ ಅರ್ಜಿ

(1ನೇ ಪುಟದಿಂದ) ವಿಚಾರಣೆ ನಡೆಸಿದ ನ್ಯಾಯಮೂರ್ತಿ ಅನಂತ ರಾಮನಾಥ ಹೆಗಡೆ ಅವರಿದ್ದ ರಜಾ ಕಾಲದ ಏಕಸದಸ್ಯ ಪೀಠ, ಈ ಸಂಬಂಧ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ ಸಮಾಜ ಕಲ್ಯಾಣ ಇಲಾಖೆಗೆ ನೋಟಿಸ್ ಜಾರಿಗೊಳಿಸಿ, ವಿಚಾರಣೆಯನ್ನು ಇದೇ ದಿನಾಂಕ 25ಕ್ಕೆ ಮುಂದೂಡಿದೆ. ಬೆಂಗಳೂರಿನ ನಿವಾಸಿ ಹಾಗೂ ಮೀಸಲಾತಿ ಸಂರಕ್ಷಣಾ ಒಕ್ಕೂಟದ ಅಧ್ಯಕ್ಷ ಹೆಚ್. ರವಿ ಅವರು ಒಳ ಮೀಸಲಾತಿ ಪ್ರಶ್ನಿಸಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದಾರೆ.

ನಿರ್ಗಮಿತ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಸಚಿವ ಸಂಪುಟ ಕಳೆದ ಮಾರ್ಚ್ 27ರಂದು ಒಳ ಮೀಸಲಾತಿಯನ್ನು ಅಂಗೀಕರಿಸಿತ್ತು.


## 2 ಸಾವಿರ ರೂ. ನೋಟುಗಳು ವಾಪಸ್

(1ನೇ ಪುಟದಿಂದ) ರಿಸರ್ವ್ ಬ್ಯಾಂಕ್ ತಿಳಿಸಿದೆ. ಅಲ್ಲದೇ, ಸ್ವಚ್ಛ ನೋಟು ನೀತಿಯ ಅನ್ವಯವೂ 2,000 ರೂ.ಗಳ ನೋಟುಗಳನ್ನು ಚಲಾವಣೆಯಿಂದ ವಾಪಸ್ ಪಡೆಯಲಾಗುತ್ತಿದೆ ಎಂದು ರಿಸರ್ವ್ ಬ್ಯಾಂಕ್ ಹೇಳಿದೆ.

ಈ ನೋಟುಗಳನ್ನು ಸಾಮಾನ್ಯ ರೀತಿಯಲ್ಲೇ ಖಾತೆಗಳಿಗೆ ಜಮಾ ಮಾಡಬಹುದಾಗಿದೆ. ನೋಟುಗಳ ಜಮಾ ಮೇಲೆ ಯಾವುದೇ ನಿರ್ಬಂಧ ಇರುವುದಿಲ್ಲ ಎಂದು ತಿಳಿಸಲಾಗಿದೆ. ಬ್ಯಾಂಕ್ ಶಾಖೆಗಳಲ್ಲಿ ತೊಂದರೆಯಾಗುವುದನ್ನು ತಪ್ಪಿಸುವ ಸಲುವಾಗಿ ಒಂದು ಬಾರಿಗೆ ಗರಿಷ್ಠ 20 ಸಾವಿರ ರೂ.ಗಳ ನೋಟುಗಳ ವಿನಿಮಯಕ್ಕೆ ಅವಕಾಶ ನೀಡಲಾಗಿದೆ. ಮೇ 23ರಿಂದ ವಿನಿಮಯಕ್ಕೆ ಅವಕಾಶ ಇರಲಿದೆ. ಶೇ.89ರಷ್ಟು 2,000 ರೂ. ನೋಟುಗಳನ್ನು ಮಾರ್ಚ್ 2017ಕ್ಕೆ ಮುಂಚೆ ಮುದ್ರಿಸಲಾಗಿತ್ತು. ಅವುಗಳ ಚಲಾವಣಾ ಅವಧಿ ಈಗ ಮುಗಿಯುತ್ತಾ ಬಂದಿದೆ.

ಮಾರ್ಚ್ 31, 2018ರಲ್ಲಿ 6.73 ಲಕ್ಷ ಕೋಟಿ ರೂ. ಮೌಲ್ಯದ ಈ ನೋಟುಗಳು ಚಲಾವಣೆಯಲ್ಲಿದ್ದವು. ಮಾರ್ಚ್ 31, 2023ಕ್ಕೆ ಇವುಗಳ ಪ್ರಮಾಣ3.62 ಲಕ್ಷ ಕೋಟಿ ರೂ.ಗಳಿಗೆ ಇಳಿಕೆಯಾಗಿದೆ. ಇದು ಒಟ್ಟು ಚಲಾವಣೆಯ ಶೇ.10.8ರಷ್ಟು ಮಾತ್ರವಾಗಿದೆ.

# 101 ತೆಂಗಿನಕಾಯಿ ಒಡೆದ ಸಿದ್ಧರಾಮಯ್ಯ ಅಭಿಮಾನಿ



ಮಲೇಬೆನ್ನೂರು, ಮೇ 19- ಮಾಜಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಪುನಃ ಮುಖ್ಯಮಂತ್ರಿಯಾದರೆ ಮಲೇಬೆನ್ನೂರಿನ ಆರಾಧ್ಯ ದೈವ ಶ್ರೀ ಬಸವೇಶ್ವರ ದೇವರಿಗೆ 101 ತೆಂಗಿನಕಾಯಿ ಒಡೆಯುವುದಾಗಿ ಹರಕೆ ಹೊತ್ತಿದ್ದ ಗ್ರಾ.ಪಂ. ಮಾಜಿ ಅಧ್ಯಕ್ಷ ಭೋವಿ ಕುಮಾರ್ ಮತ್ತು ಪುರಸಭೆ ಸದಸ್ಯೆ ಶ್ರೀಮತಿ ಮಂಜುಳಾ ಭೋವಿಕುಮಾರ್ ದಂಪತಿ ಶುಕ್ರವಾರ ಹರಕೆ ಸಮರ್ಪಿಸಿದರು.

ಶ್ರೀ ಬಸವೇಶ್ವರ ದೇವರಿಗೆ ವಿಶೇಷ ಪೂಜೆ ಸಲ್ಲಿಸಿದ ನಂತರ ಜಿ.ಪಂ. ಮಾಜಿ ಸದಸ್ಯ ಬೆಣ್ಣೆಹಳ್ಳಿ ಹಾಲೇಶಪ್ಪ ಅವರ ನೇತೃತ್ವದಲ್ಲಿ ಭೋವಿಕುಮಾರ್ ಮತ್ತು ಶ್ರೀಮಂಜುಳಾ ಸೇರಿದಂತೆ ಕಾಂಗ್ರೆಸ್ ಕಾರ್ಯಕರ್ತರು, ಅಭಿಮಾನಿಗಳು, ರಾಜ್ಯದಲ್ಲಿ ಉತ್ತಮ ಆಡಳಿತ ನೀಡಲು ಸಿದ್ಧರಾಮಯ್ಯ ಅವರಿಗೆ ಶಕ್ತಿ ನೀಡುವಂತೆ ಪ್ರಾರ್ಥಿಸಿದರು.

ಇದಕ್ಕೂ ಮುನ್ನ ಇಲ್ಲಿನ ಸೈಯದ್ ಹಬೀಬುಲ್ಲಾ ಷಾ ಖಾದ್ರಿ ಅವರ ದರ್ಗಾದಲ್ಲೂ ಚಾದರ ಹೊದಿಸಿ ಓದಿಕೆ ಮಾಡಿಸಲಾಯಿತು.

ನಂತರ ಮುಖ್ಯ ವೃತ್ತದಲ್ಲಿ ಸಿದ್ಧರಾಮಯ್ಯ ಅವರ ಕಟೌಟ್ ಸಮ್ಮುಖದಲ್ಲಿ ಪಟಾಕಿ ಸಿಡಿಸಿ, ಸಿಹಿ ವಿತರಿಸಿ ಸಂಭ್ರಮಾಚರಣೆ ಆಚರಿಸಲಾಯಿತು.

ಸೈಯದ್ ಜಾಕೀರ್, ಪುರಸಭೆ ಸದಸ್ಯರಾದ ಸಾಬೀರ್ ಅಲಿ, ನಯಾಜ್, ಷಾ ಅಬ್ರಾರ್, ಕೆ.ಜಿ. ಲೋಕೇಶ್, ಖಲೀಲ್, ಭೋವಿ ಶಿವು, ಶಬ್ಬೀರ್ ಖಾನ್, ದಾದಾಪೀರ್, ಎಂ.ಬಿ. ರುಸ್ತುಂ, ಜನತಾ ಬಜಾರ್ ನಿರ್ದೇಶಕ ಪಿ.ಹೆಚ್. ಶಿವಕುಮಾರ್, ಕಿಸಾನ್ ಕಾಂಗ್ರೆಸ್ ಅಧ್ಯಕ್ಷ ಕುಂಬಳೂರು ವಾಸು, ಪಿಎಸಿಎಸ್ ಮಾಜಿ ಅಧ್ಯಕ್ಷ ಪಿ.ಆರ್. ಕುಮಾರ್, ತಾ.ಪಂ. ಮಾಜಿ ಅಧ್ಯಕ್ಷ ಆದಾಪುರ ವೀರಭದ್ರಪ್ಪ, ಎಳೆಹೊಳೆ ಕುಮಾರ್, ಪೂಜಾರ್ ದೇವರಾಜ್, ಪಿ.ಬಿ. ಬೀರಪ್ಪ, ಪಿ.ಹೆಚ್. ಹಾಲೇಶ್, ಪೂಜಾರ್ ನಾರಾಯಣಪ್ಪ, ಪೂಜಾರ್ ಮಹೇಶ್, ಗಿರೀಶ್, ಪಿ.ಜೆ. ಗಂಗಾಧರ್, ಮಡಿವಾಳರ ರಾಜು, ಬುರಾನ್, ಮೈದೂರು ಹಿದಾಯಿತ್, ಗೋಣಿಗೆರೆ ದಾದಾಪೀರ್, ಕಣ್ಣಾಳ್ ನಾಗರಾಜ್, ಸರ್ಫರಾಜ್, ಹುಳ್ಳಿ ಪ್ರಭು, ಎಸ್. ಬೀರೇಶ್, ಷಾಬಾಜ್ ಅಲಿ, ದೊಡ್ಮನಿ ಬಸವರಾಜ್ ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

## ಕರುಣಾದಿಂದ ನೀರಿನ ಕ್ಯಾನ್ ವ್ಯವಸ್ಥೆ



ದಾವಣಗೆರೆ, ಮೇ 19- ನೀರು ಸಕಲ ಜೀವಿಗಳಿಗೆ ಅತ್ಯಗತ್ಯ. ಬೇಸಿಗೆಯ ದಿನಗಳಲ್ಲಿ ಪಶು-ಪಕ್ಷಿ, ಮಾನವರಿಗೆ ನೀರಿನ ದಾಹ ತೀರಿಸುವುದು ಪುಣ್ಯದ ಕಾಯಕ.

ನಗರಕ್ಕೆ ವ್ಯಾಪಾರ ಮತ್ತು ಆಸ್ಪತ್ರೆ ಇತ್ಯಾದಿಗಾಗಿ ಬರುವಂತಹ ಸುತ್ತ ಮುತ್ತಲಿನ ಜನರಿಗೆ ಕುಡಿಯುವ ನೀರಿನ ಕೊರತೆ ಆಗಬಾರದೆಂಬ ಸದುದ್ದೇಶದಿಂದ ಕರುಣಾ ಜೀವ ಕಲ್ಯಾಣ ಟ್ರಸ್ಟ್ ಅಲ್ಲಲ್ಲಿ ಸಾರ್ವಜನಿಕರು ಓಡಾಡುವಂತಹ ಸ್ಥಳಗಳಲ್ಲಿ ಅಂದರೆ, ಔಷಧಿ ಅಂಗಡಿ, ಕಿರಾಣಿ ಅಂಗಡಿ ಮುಂತಾದೆಡೆಯಲ್ಲಿ 25 ಲೀಟರ್ ವಾಟರ್‌ಕ್ಯಾನ್‌ಗಳನ್ನು ಇಟ್ಟು ನೀರಿನ ದಾಹ ತಣಿಸಲು ಮುಂದಾಗಿದೆ.

ಈ ಸತ್ಕಾರ್ಯಕ್ಕೆ ಧನ ಸಹಾಯವಿತ್ತು ಸಹಕರಿಸುವವರು ಮತ್ತು ವಾಟರ್‌ಕ್ಯಾನ್‌ಗಳನ್ನು ತಮ್ಮ ಅಂಗಡಿ ಮುಂದೆ ಇಟ್ಟು, ಸಾರ್ವಜನಿಕರಿಗೆ ನೀರು ಒದಗಿಸಲು ಇಚ್ಛಿಸುವವರು ಲಿಂಗರಾಜ್ (9538024422) ಅವರನ್ನು ಸಂಪರ್ಕಿಸುವಂತೆ ಕರುಣಾ ಟ್ರಸ್ಟ್ ತಿಳಿಸಿದೆ.


## ಬಂಗಾಳ ಕೊಲ್ಲಿ ತಲುಪಿದ ಮುಂಗಾರು

(1ನೇ ಪುಟದಿಂದ) ಸಜ್ಜಾಗಿದೆ. ಮುಂದಿನ ಮೂರ್ನಾಲ್ಕು ದಿನಗಳಲ್ಲಿ ಮುಂಗಾರು ಇನ್ನಷ್ಟು ಪ್ರದೇಶಗಳಿಗೆ ವಿಸ್ತರಿಸಲು ಪರಿಸ್ಥಿತಿ ಅನುಕೂಲಕರವಾಗಿದೆ ಎಂದು ಹವಾಮಾನ ಇಲಾಖೆ ಹೇಳಿದೆ.

ಮುಂಗಾರು ಕೇರಳ ತಲುಪುವುದು ಈ ವರ್ಷ ಸ್ವಲ್ಪ ವಿಳಂಬವಾಗಲಿದೆ. ವಾಡಿಕೆಯಂತೆ ಜೂನ್ 1ರ ಬದಲು ಜೂನ್ 4ಕ್ಕೆ ಮುಂಗಾರು ಬರಲಿದೆ ಎಂದು ಹವಾಮಾನ ಇಲಾಖೆ ಕೆಲ ದಿನಗಳ ಹಿಂದೆ ತಿಳಿಸಿತ್ತು.


॥ ಶ್ರೀ ಗೌರಸಂದ್ರ ಮಾರಮ್ಮ ಪ್ರಸನ್ನ ॥

ಐದನೇ ವರ್ಷದ ಪುಣ್ಯಸ್ಮರಣೆ



ನೀವು ನಮ್ಮನ್ನಗಲಿ ಇಂದಿಗೆ ಐದು ವರ್ಷಗಳಾದವು. ನಿಮ್ಮ ಸವಿ ನೆನಪು ನಮ್ಮಲ್ಲಿ ಸದಾ ಹಸಿರಾಗಿದೆ. ಸದಾ ನಿಮ್ಮ ನೆನಪಿನಲ್ಲಿರುವ...

ಶ್ರೀ ಮಹಾಂತೇಶ್ ಪಿ.ಕೆ.
ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಸಿಡಾಕ್, ಧಾರವಾಡ,

ಇಂತಿ ದುಃಖತಪ್ತರು:
ಪತ್ನಿ: ಶ್ರೀಮತಿ ಯಶೋಧ ಮತ್ತು ಮಕ್ಕಳು
ಶ್ರೀ ಕೆ. ಮಾರಪ್ಪ ಮತ್ತು ಸಹೋದರರು, ಮಕ್ಕಳು, ಮೊಮ್ಮಕ್ಕಳು ಪುರಲೆ
ಶ್ರೀಮತಿ ಯಲ್ಲಮ್ಮ ಮತ್ತು ಮಕ್ಕಳು, ದಾವಣಗೆರೆ.
ಹಾಗೂ ಬಂಧು-ಮಿತ್ರರು. ಮೊ: 98440 01462


## ಪ್ರಮಾಣ ವಚನಕ್ಕೆ ಮಮತಾ ಗೈರು

ಕೊಲ್ಕೊತಾ, ಮೇ 19 - ಕರ್ನಾಟಕದಲ್ಲಿ ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸುವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳದಿರಲು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಹಾಗೂ ಟಿ.ಎಂ.ಸಿ. ನಾಯಕ ಮಮತಾ ಬ್ಯಾನರ್ಜಿ ನಿರ್ಧರಿಸಿದ್ದಾರೆ. ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೇ ಮಮತಾರಿಗೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಆಹ್ವಾನ ನೀಡಿದ್ದರು. ಆದರೆ, ಮಮತಾ ತಾವು ಪಾಲ್ಗೊಳ್ಳದೇ ಪಕ್ಷದ ನಾಯಕ ಕಕೋಳಿ ಘೋಶ್ ದಸ್ತಿದಾರ್ ಅವರನ್ನು ಕಳಿಸುತ್ತಿದ್ದಾರೆ. ಪ್ರಮಾಣ ವಚನ ಕಾರ್ಯಕ್ರಮವನ್ನು ವಿಪಕ್ಷಗಳ ಶಕ್ತಿ ಪ್ರದರ್ಶನದ ವೇದಿಕೆಯಾಗಿ ಪರಿವರ್ತಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಮಮತಾ ನಿರ್ಧಾರ ಪ್ರಾಮುಖ್ಯತೆ ಪಡೆದುಕೊಂಡಿದೆ.

# ಸೃಜನಶೀಲತೆ, ಕ್ರಿಯಾಶೀಲತೆ ಬೆಳವಣಿಗೆಗೆ ಬೇಸಿಗೆ ಶಿಬಿರ ಪೂರಕ

### ನ್ಯಾಮತಿಯಲ್ಲಿ ಬೇಸಿಗೆ ಶಿಬಿರದ ಸಮಾರೋಪ



ನ್ಯಾಮತಿ, ಮೇ 19- ರಜಾ ದಿನಗಳಲ್ಲಿ ನಡೆಯುವ ಮಕ್ಕಳ ಬೇಸಿಗೆ ಶಿಬಿರದಿಂದ ನಮ್ಮಲ್ಲಿಯ ಸೃಜನಶೀಲತೆ, ಕ್ರಿಯಾಶೀಲತೆ ಬೆಳೆಯುವುದಕ್ಕೆ ಕಾರಣವಾಗುತ್ತದೆ. ಬದುಕಿಗೆ ಪೂರಕವಾದ ಶಿಕ್ಷಣ ಮುಂದಿನ ಜೀವನಕ್ಕೆ ಸಹಕಾರಿಯಾಗುತ್ತದೆ ಎಂದು ಶಾಲಾ ಮುಖ್ಯ ಶಿಕ್ಷಕರಾದ ಜಾಕ್ಷಮ್ಮ ಹೇಳಿದರು.

ನ್ಯಾಮತಿ ತಾಲ್ಲೂಕು ಜೀನಹಳ್ಳಿ ಮತ್ತು ಕತ್ತಿಗೆ ಕ್ರಾಸ್ ಬಳಿಯಿರುವ ಶ್ರೀ ಬಸವೇಶ್ವರ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಒಂದು ತಿಂಗಳ ಕಾಲ ಆಯೋಜಿಸಿದ್ದ ಮಕ್ಕಳ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಸೃಜನಾತ್ಮಕ ಮತ್ತು ಕ್ರಿಯಾತ್ಮಕ ಚಟುವಟಿಕೆಗಳು ಪಾಲಕರು ತಮ್ಮ ಮಕ್ಕಳ ಕಲಿಕೆಗೆ ಪ್ರೋತ್ಸಾಹ ನೀಡುವ ಮೂಲಕ ಅವರ ವಿದ್ಯಾಭ್ಯಾಸಕ್ಕೆ ದಾರಿದೀಪವಾಗಬೇಕು ಎಂದು ಕರೆ ನೀಡಿದರು.

ಕಾರ್ಯನಿರತ ಪತ್ರಕರ್ತರ ಸಂಘದ ಹೊನ್ನಾಳಿ ಘಟಕದ ಅಧ್ಯಕ್ಷ ಯೋಗೀಶ್ ಕೋರಿ ಕುಳಗಟ್ಟೆ ಮಾತನಾಡಿ, ಸಮಯದ ಸದುಪಯೋಗ ಬಹಳ ಮುಖ್ಯವಾಗಿದೆ. ರಜೆಯ ಅವಧಿಯಲ್ಲಿ ಮಕ್ಕಳು ಬೇಸಿಗೆ ಶಿಬಿರಗಳಲ್ಲಿ ಭಾಗವಹಿಸುವುದ ರಿಂದ ಸೃಜನಾತ್ಮಕ ಕಲಿಕೆ ಸಾಧ್ಯವಿದ್ದು, ಮಕ್ಕಳನ್ನು ಪಾಲಕರು ಶೈಕ್ಷಣಿಕ ಜಾಗೃತಿಯಿಂದ ಬೆಳೆಸಬೇಕು ಎಂದು ಹೇಳಿದರು.

ಕಾರ್ಯನಿರತ ಪತ್ರಕರ್ತರ ಸಂಘದ ನ್ಯಾಮತಿ ಘಟಕದ ಸಂಚಾಲಕ ಎಂ.ಎಸ್. ಶಾಸ್ತ್ರಿ ಹೊಳೆಮಠ್ ಮಾತನಾಡಿ, ಚಿಕ್ಕ ವಯಸ್ಸಿನಲ್ಲಿ ಮಕ್ಕಳು ಕನಸು ಕಂಡರೆ ದೊಡ್ಡವರಾದ ಮೇಲೆ ನನಸು ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಪಾಲಕರು ತಮ್ಮ ಮಕ್ಕಳ ಕಲಿಕೆಗೆ ಪ್ರೋತ್ಸಾಹ ನೀಡುವ ಮೂಲಕ ಅವರ ವಿದ್ಯಾಭ್ಯಾಸಕ್ಕೆ ದಾರಿದೀಪವಾಗಬೇಕು ಎಂದು ತಿಳಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ವಿದ್ಯಾ ಸಂಸ್ಥೆಯ ಕಾರ್ಯದರ್ಶಿ ಸುರೇಶ್ ಮಾತನಾಡಿ, ಪ್ರತಿ ವರ್ಷ ಮಕ್ಕಳ ಶಿಬಿರ ಸಂಘಟಿಸಿ, ಮಕ್ಕಳಿಗೆ ಮಣ್ಣಿನ ಮಾದರಿ, ಚಿತ್ರಕಲೆ, ನೃತ್ಯ , ಭರತ ನಾಟ್ಯ, ಸ್ಪೋಕನ್ ಇಂಗ್ಲಿಷ್, ಅಬಾಕಸ್ ಸೇರಿದಂತೆ ಮೊದಲಾದ ತರಬೇತಿ ಹಾಗೂ ಮಾಹಿತಿಗಳನ್ನು ಮಕ್ಕಳಿಗೆ ನೀಡಲಾಗುತ್ತಿದೆ ಎಂದು ಹೇಳಿದರು.

ವೇದಿಕೆಯಲ್ಲಿದ್ದ ಕಾರ್ಯನಿರತ ಪತ್ರಕರ್ತರ ಸಂಘದ ಹೊನ್ನಾಳಿ ಘಟಕದ ಮಾಜಿ ಅಧ್ಯಕ್ಷ ಮೃತ್ಯುಂಜಯ ಪಾಟೀಲ್, ಸ್ಪೋಕನ್ ಇಂಗ್ಲಿಷ್ ಶಿಕ್ಷಕಿ ಪವಿತ್ರ, ಭರತ ನಾಟ್ಯ ಶಿಕ್ಷಕಿ ಸ್ನೇಹ, ಶಿಬಿರಾರ್ಥಿಗಳಾದ ಛಾಯಾ, ಮೋಕ್ಷ, ಯೋಗೀಶ್ ಮಕ್ಕಳ ಬೇಸಿಗೆ ಶಿಬಿರ ಕುರಿತು ಮಾತನಾಡಿದರು.

KA/SK/CTA-275/2021-2023. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಸೈಕಲ್ ಕೊಟ್ರಪ್ಪನವರ ಸಾಂಗತ್ಯಗಳ 'ಸುವರ್ಣ ಸಂಭ್ರಮ'

**ಸೈಕಲ್ ಸಂಗಾತಿಗೆ ಐವತ್ತೊಂದು ವರ್ಷ... ಬಾಳಸಂಗಾತಿಯ ಕೈ ಹಿಡಿದು ಐವತ್ತು ವರ್ಷ... ಈ ಸಾಂಗತ್ಯದ ಸುವರ್ಣ ಸಂಭ್ರಮಕ್ಕಾಗಿ "ಅವ್ವ ಹಚ್ಚಿದ ದೀಪ" ಕವನ ಸಂಕಲನ ಬಿಡುಗಡೆ**



ಕಾಂ. ಹೆಚ್.ಕೆ. ಕೊಟ್ರಪ್ಪ ಅಂದರೆ ಹರಿಹರ ಹಾಗೂ ಕೈಗಾರಿಕಾ ವಲಯದಲ್ಲಿ ಜನಪ್ರಿಯ ಹೆಸರು. ಬರೀ ಕಾರ್ಮಿಕ ವಲಯ ಒಂದೇ ಅಲ್ಲ, ಸಾಹಿತ್ಯ ಹಾಗೂ ಸಾಂಸ್ಕೃತಿಕ ವಲಯದಲ್ಲಿ ಪ್ರೀತಿಪಾತ್ರ ಹೆಸರು... ಇವರಿಗೆ ಅನ್ವರ್ಥವಾಗಿ ಬಂದ ಇನ್ನೊಂದು ಹೆಸರು "ಸೈಕಲ್ ಕೊಟ್ರಪ್ಪ"...!

ಐವತ್ತು ವರ್ಷ ಬಾಳ ಸಂಗಾತಿಯೊಂದಿಗೆ ಅರ್ಥಾತ್ ಧರ್ಮಪತ್ನಿಯೊಂದಿಗೆ ಜೀವನವನ್ನು ಸುಂದರ, ಸೌಹಾರ್ದ ಹಾಗೂ ಅವಿನಾಭಾವದೊಂದಿಗೆ ಕಳೆದ ಸಾರ್ಥಕಗೊಂಡ ಖುಷಿಗೆ ಸಮರಸ ಸಂಸಾರದ "ಸುವರ್ಣ ಮಹೋತ್ಸವ" ಆಚರಿಸಿಕೊಳ್ಳುವುದು ಲೋಕಾರೂಢಿ...

ಅಚ್ಚರಿಯ ಸಂಗತಿ ಅಂದರೆ ನಮ್ಮ ಸೈಕಲ್ ಕೊಟ್ರಪ್ಪ ಅವರು 1972ರಲ್ಲಿ ತಾವು ಕಾರ್ಮಿಕರಾಗಿ ದುಡಿಯುತ್ತಿದ್ದ ಹರಿಹರದ ಪಾಲಿಫೈಬರ್ಸ್ ಕಂಪನಿಗೆ ಓಡಾಡಲು ಒಂದು ಸೈಕಲ್ ಕೊಂಡುಕೊಳ್ಳುತ್ತಾರೆ. ಅದೂ ಕಾರ್ಮಿಕ ಸಂಘಟನೆ ಬೇಡಿಕೆಯಿಂದ ಸಂಬಳದಲ್ಲಿ ತಿಂಗಳಿಗೆ ಹತ್ತು ರೂ. ಮುರಿದುಕೊಂಡು ಸೈಕಲ್ ಕೊಳ್ಳಲು ಕಂಪನಿ ಸಾಲ ನೀಡುವ ಸ್ಕೀಮಿನಲ್ಲಿ. ಸೈಕಲ್ ಹೆಸರು "ಸ್ಪೀಡ್ ಕಿಂಗ್"...

ಸ್ಪೀಡ್ ಕಿಂಗ್ ಸೈಕಲ್ ಏರಿ ಪ್ರತಿದಿನ ಹರಿಹರದಿಂದ ಪಾಲಿಫೈಬರ್ಸ್ ಕಂಪನಿಗೆ ತಮ್ಮ ಕಾಯಕಕ್ಕೆ ತೆರಳುತ್ತಿದ್ದ ಹೆಚ್.ಕೆ. ಕೊಟ್ರಪ್ಪ ಅವರು, ಮುಂದೆ ತಮ್ಮ ಮತ್ತು ಅವರ ಸಂಗಾತಿಗಳೊಂದಿಗೆ ಸೇರಿ ಕಾರ್ಮಿಕ ಸಂಘಟನೆಗೆ ಇಳಿದು "ಕಾಮ್ರೆಡ್" ಎಚ್.ಕೆ. ಕೊಟ್ರಪ್ಪ ಆಗುತ್ತಾರೆ.

ವೃತ್ತಿ ಸೇವೆ ಹೆಚ್ಚಿದಂತೆ ಕೊಟ್ರಪ್ಪ ಅವರ ಸಂಬಳವೂ ಹೆಚ್ಚಾಗುತ್ತದೆ. ಕಂಪನಿಯವರು ಸ್ಕೂಟರ್ ಕೊಳ್ಳಲು ಮುಂಗಡ ನೀಡಲು ಮುಂದಾಗುತ್ತಾರೆ. ಕೊಟ್ರಪ್ಪ ಅವರೊಡನೆ ಸೇವೆ ಸಲ್ಲಿಸುತ್ತಾ ಇದ್ದ ಅನೇಕ ಅವರ ಸಂಗಾತಿಗಳು ಕಾರ್ಖಾನೆಯಿಂದ ಮುಂಗಡ ಪಡೆದು ಸ್ಕೂಟರ್ ಕೊಳ್ಳುತ್ತಾರೆ. ಆದರೆ ಕಾಂ. ಕೊಟ್ರಪ್ಪ ಅವರು ತಮ್ಮ ಸ್ಪೀಡ್ ಕಿಂಗ್ ಸೈಕಲ್‌ನಲ್ಲೇ ಕೆಲಸಕ್ಕೆ ಹೋಗಿಬರುತ್ತಾರೆ.

ಹರಿಹರದಿಂದ ಪಾಲಿಫೈಬರ್ಸ್‌ಗೆ ಐದಾರೂ ಕಿ.ಮೀ. ದೂರ ಇರುವುದರಿಂದ ಕಂಪನಿ ಪ್ರತಿದಿನ ಹತ್ತು ರೂ.ಗಳ ಪ್ರಯಾಣ ಭತ್ಯೆ ನೀಡುತ್ತದೆ. ಇದರಿಂದಾಗಿ ಕೊಟ್ರಪ್ಪ ಅವರು ಪ್ರತಿ ತಿಂಗಳು 260 ರೂ. ಹೆಚ್ಚುವರಿ ಸಂಬಳ ಪಡೆದು "ಸೈಕಲ್ ಸವಾರಿ" ಮಾಡಿ ತಮ್ಮ ದೈಹಿಕ ಆರೋಗ್ಯವನ್ನು ಸದೃಢಗೊಳಿಸಿಕೊಳ್ಳುತ್ತಾರೆ. ಇದಕ್ಕೂ ಹೆಚ್ಚಿನ ಅಚ್ಚರಿ ಎಂದರೆ, ಅವರು ವೃತ್ತಿಯಿಂದ ನಿವೃತ್ತಿಗೊಳ್ಳುವವರೆಗೆ ಸ್ಪೀಡ್‌ಕಿಂಗ್ ಸೈಕಲ್‌ನಲ್ಲೇ ಓಡಾಡುತ್ತಾರೆ... ಇಷ್ಟೇ ಅಲ್ಲ ಇಂದಿಗೂ, ಈವತ್ತಿಗೂ ಸವಾರಿ ಮಾಡುವುದು ಅದೇ "ಸ್ಪೀಡ್ ಕಿಂಗ್" ಸೈಕಲ್‌ನಲ್ಲೇ....!

ಎಚ್.ಕೆ. ಕೊಟ್ರಪ್ಪ ಅವರು ಮದುವೆ ಆದದ್ದು 1973ರಲ್ಲಿ ಅಂದರೆ "ಸ್ಪೀಡ್‌ಕಿಂಗ್" ಸೈಕಲ್ ಕೊಂಡುಕೊಂಡು ಒಂದು ವರ್ಷದ ನಂತರ. ತಮ್ಮ ಶ್ರೀಮತಿಯನ್ನು ಸಾವಿರಾರು ಸಾರಿ "ಸ್ಪೀಡ್‌ಕಿಂಗ್" ಸೈಕಲ್ ಹಿಂಬದಿಗೆ ಕೂರಿಸಿಕೊಂಡು ತುಂಗಭದ್ರೆಯ ಆಚೆ-ಈಚೆ ಓಡಾಡಿದ್ದಾರೆ. ತಮ್ಮ ಶ್ರೀಮತಿ, ಸ್ಪೀಡ್ ಕಿಂಗ್ ಸೈಕಲ್ ಎರಡೂ ಅವರ ಬದುಕಿನ ಅವಿಭಾಜ್ಯ ಅಂಗವಾಗಿ ಬಂದದ್ದನ್ನು ಕಣ್ಣಾಲೆಯಲ್ಲಿ ಆನಂದದ ಭಾಷ್ಪ ತುಂಬಿಕೊಂಡು ನೆನೆಯುತ್ತಾರೆ.

ಕಳೆದ ವರ್ಷ "ವಿಶ್ವ ಸೈಕಲ್ ದಿನಾಚರಣೆ" ಅಂಗವಾಗಿ ತಾವು ಸಾಕಿಕೊಂಡು ಬಂದಿದ್ದ "ಸ್ಪೀಡ್ ಕಿಂಗ್" ಸೈಕಲ್ಲನ್ನು ಹರಿಹರ ತುಂಬಾ ಮೆರವಣಿಗೆ ಮಾಡಿ, ಸಾಹಿತ್ಯ ಗೋಷ್ಠಿ ನಡೆಸಿದರು. ಈ ವರ್ಷ ತಾವು ದಾಂಪತ್ಯ ಜೀವನಕ್ಕೆ ಕಾಲಿರಿಸಿದ "ಸುವರ್ಣ ಮಹೋತ್ಸವ" ಸೈಕಲ್ ಸಂಗಾತಿಗೆ ಐವತ್ತೊಂದು ವರ್ಷ... ಬಾಳಸಂಗಾತಿಯ ಕೈ ಹಿಡಿದು "ಐವತ್ತು"ವರ್ಷ....!

ಕೊಟಗಿ ಹನುಮಂತಪ್ಪ-ಗೋಪಮ್ಮ ದಂಪತಿಗೆ 1947ರಲ್ಲಿ ಜನಿಸಿದ ಎಚ್.ಕೆ. ಕೊಟ್ರಪ್ಪ ಅವರು ಓದಿದ್ದು ಎಸ್ಸೆಸ್ಸೆಲ್ಸಿ... ಬದುಕು ಕಟ್ಟಿಕೊಳ್ಳಲು ಪಾಲಿಫೈಬರ್ಸ್‌ನಲ್ಲಿ ಕಾರ್ಮಿಕರಾಗಿ ಸೇರಿಕೊಂಡರು. 1973ರಲ್ಲಿ ದಾಂಪತ್ಯ ಜೀವನಕ್ಕೆ...

ಕೊಟ್ರಪ್ಪನವರಿಗೆ ಚಿಕ್ಕಂದಿನಿಂದಲೂ ಸಾಹಿತ್ಯ ಸಾಂಸ್ಕೃತಿಕ ಚಟುವಟಿಕೆಗಳ ಗೀಳಿತ್ತು. ಹೀಗಾಗಿ ತಮ್ಮ ಕಾರ್ಮಿಕ ವೃತ್ತಿಯ ಜೊತೆ ಜೊತೆಗೆ ಹಂಪಿ ಕನ್ನಡ ವಿ.ವಿ. ಮೂಲಕ ಅಂಚೆ ತೆರಪಿನ ಶಿಕ್ಷಣದಲ್ಲಿ ಪತ್ರಿಕೋದ್ಯಮ ಡಿಪ್ಲೋಮಾ ಪಡೆಯುತ್ತಾರೆ. ಆಗ ಅವರ ವಯಸ್ಸು ಅರವತ್ಮೂರು...

ಅವರು ಕವಿತೆ ರಚಿಸುವುದು, ಕಥೆ ಹೆಣೆಯುವುದು, ಲೇಖನ ಗೀಜುವುದು ಮಾಡುತ್ತಾ ಬಂದು, ನಂತರದಲ್ಲಿ ಬರಹ ಲೋಕದಲ್ಲಿ ತಮ್ಮದೇ ಆದ ಛಾಪು ಮೂಡಿಸುತ್ತಾರೆ. ಅವರ ಕವಿತೆಗಳು, ಲೇಖನಗಳು ನಾಡಿನ ಹೆಸರಾಂತ ಪತ್ರಿಕೆಗಳಾದ ಜನತಾವಾಣಿ, ಪ್ರಜಾವಾಣಿ, ಸಂಯುಕ್ತ ಕರ್ನಾಟಕ, ವಿಜಯಕರ್ನಾಟಕ, ಮುಂತಾದವುಗಳಲ್ಲಿ ಹಾಗೂ ಸುಧಾ, ಕರ್ಮವೀರ, ತುಷಾರ, ಕೆಂಬಾವುಟ, ಹೊಸತು ಮುಂತಾದ ನಿಯತ ಕಾಲಿಕಗಳಲ್ಲಿ ಪ್ರಕಟಗೊಂಡಿವೆ. ಅವರ ಎರಡು ಕವನ ಸಂಕಲನ ಪ್ರಕಟವಾಗಿವೆ.

ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟ ಸಂಬಂಧ ಹೊಂದಿರುವ ಕೊಟ್ರಪ್ಪನವರು ಬಂಡಾಯ ಸಾಹಿತ್ಯ ಸಂಘಟನೆಯಲ್ಲೂ ತೊಡಗಿಸಿಕೊಂಡಿದ್ದಾರೆ. ತಮ್ಮ ವೃತ್ತಿ ಜೀವನದ ಕಾರ್ಮಿಕ ಹೋರಾಟ ದಲ್ಲಿ ಸುಮಾರು ಇನ್ನೂರು ಬಡಜನತೆಗೆ ನಿವೇಶನ ಕೊಡಿಸಿದ ಬಗ್ಗೆ ತೃಪ್ತಿ ವ್ಯಕ್ತಪಡಿಸುತ್ತಾರೆ...

ತಮ್ಮ ಇಷ್ಟೆಲ್ಲಾ ಹೋರಾಟ, ಯಶಸ್ಸುಗಳಿಗೆ ಕಾರಣ ತನ್ನ ತಂದೆ-ತಾಯಿಗಳು ಎಂದು ಸ್ಮರಿಸುವ ಕೊಟ್ರಪ್ಪ ಅವರು "ತಮ್ಮ ಸಾಂಸಾರಿಕ ಸಾಂಗತ್ಯದ ಸುವರ್ಣ ಸಂಭ್ರಮ"ಕ್ಕಾಗಿ ಮತ್ತೊಂದು ಕವನ ಸಂಕಲ ಹೊರತರುತ್ತಿದ್ದಾರೆ. ಶೀರ್ಷಿಕೆ "ಅವ್ವ ಹಚ್ಚಿದ ದೀಪ"... ಇದೇ ಮೇ 21 ರಂದು ಬೆಳಿಗ್ಗೆ 10 ಗಂಟೆಗೆ ಹರಿಹರದ ಕಾಳಿದಾಸ ವಿದ್ಯಾಸಂಸ್ಥೆ ಆವರಣದಲ್ಲಿ ಬಿಡುಗಡೆಯಾಗಲಿದೆ....

- ಬಾ.ಮ. ಬಸವರಾಜಯ್ಯ
ಲೇಖಕರು, ಹಿರಿಯ ಪತ್ರಕರ್ತರು



**ಕಟ್ಟೋಣ ಬಾರಾ ಸ್ವಂತ ಮನೆಯೊಂದ...!**

ಚಿತ್ರ: ರಫೀಕ್, ಜನತಾವಾಣಿ

ಸ್ವಂತ ಸೂರಿನ ಅನಿವಾರ್ಯತೆ ಮನುಷ್ಯನಿಗಷ್ಟೇ ಅಲ್ಲ, ಪಕ್ಷಿಗಳಿಗೂ ಬೇಕು. ಅಂದ ಹಾಗೆ ದಾವಣಗೆರೆ ಸಮೀಪದ ಕುಂದುವಾಡ ಕೆರೆ ಏರಿ ಬಳಿ ಗೀಜಗವೊಂದು ಗೂಡು ಕಟ್ಟುತ್ತಿತ್ತು.

## ಜೂ.5ರಿಂದ ಕೇರಳದಲ್ಲಿ ಉಚಿತ ಇಂಟರ್‌ನೆಟ್

ತಿರುವಂತಪುರಂ, ಮೇ 19- ಬರುವ ಜೂನ್ 5ರಿಂದ ಕೇರಳದ ಎಲ್ಲ ಬಡವರಿಗೆ ಉಚಿತ ಇಂಟರ್‌ನೆಟ್ ಸಂಪರ್ಕ ಕಲ್ಪಿಸಲಾಗುವುದು ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ತಿಳಿಸಿದ್ದಾರೆ.

ಆರ್ಥಿಕವಾಗಿ ಹಿಂದುಳಿದ 20 ಲಕ್ಷ ಕುಟುಂಬಗಳಿಗೆ ಕೆ - ಎಫ್.ಒ.ಎನ್. (ಕೇರಳ ಆಪ್ಟಿಕ್ ಫೈಬರ್ ನೆಟ್‌ವರ್ಕ್) ಮೂಲಕ ಉಚಿತ ಇಂಟರ್‌ನೆಟ್ ನೀಡಲಾಗುವುದು. ಉಳಿದವರು ಕಡಿಮೆ ವೆಚ್ಚದಲ್ಲಿ ಇದೇ ಜಾಲದಿಂದ ಇಂಟರ್‌ನೆಟ್ ಪಡೆಯಬಹುದು ಎಂದು ವಿಜಯನ್ ತಿಳಿಸಿದ್ದಾರೆ.

ಖಾಸಗಿ ಕೇಬಲ್ ಹಾಗೂ ಮೊಬೈಲ್ ಸೇವಾದಾರರ ಶೋಷಣೆ ತಡೆಯಲು ಸರ್ಕಾರವೇ ಕೆ-ಎಫ್.ಒ.ಎನ್. ಆರಂಭಿಸಿದೆ. ಇದರಿಂದ ಡಿಜಿಟಲ್ ಅಂತರ ಕಡಿಮೆಯಾಗಲಿದೆ ಎಂದವರು ತಿಳಿಸಿದ್ದಾರೆ.

ಕೇರಳ ಸರ್ಕಾರವು ಇಂಟರ್‌ನೆಟ್ ಅನ್ನು ಮೂಲಭೂತ ಹಕ್ಕು ಎಂದು ಘೋಷಿಸಿತ್ತು. ಈ ಕ್ರಮ ತೆಗೆದುಕೊಂಡ ಮೊದಲ ರಾಜ್ಯ ಕೇರಳವಾಗಿದೆ.

# ಬಿ.ಪಿ.ಎಲ್. ಕಾರ್ಡ್‌ಗಷ್ಟೇ ಸಿಗಲಿದೆಯೇ ಗ್ಯಾರಂಟಿ ?

ಬೆಂಗಳೂರು, ಮೇ 19 – ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ನಾಳೆ ಶನಿವಾರ ಅಧಿಕಾರ ವಹಿಸಿಕೊಳ್ಳಲಿದೆ. ಎಲ್ಲರ ದೃಷ್ಟಿ ಈಗ ಸರ್ಕಾರ ರಚನೆಯ ಜೊತೆಗೆ, ಗ್ಯಾರಂಟಿಗಳ ಮೇಲೂ ಇದೆ.

ಉಚಿತ ವಿದ್ಯುತ್‌ನ ಗೃಹ ಜ್ಯೋತಿ, ಗೃಹಿಣಿಯರಿಗೆ ನಗದು ನೀಡುವ ಗೃಹ ಲಕ್ಷ್ಮಿ, ಅನ್ನ ಭಾಗ್ಯ, ನಿರುದ್ಯೋಗಿಗಳಿಗೆ ನೆರವು ನೀಡುವ ಯುವ ನಿಧಿ ಹಾಗೂ ಉಚಿತ ಸಾರಿಗೆಯ ನಾರಿ ಶಕ್ತಿ ಯೋಜನೆಗಳನ್ನು ಜಾರಿಗೆ ತರುವುದಾಗಿ ಕಾಂಗ್ರೆಸ್ ಅಬ್ಬರದ ಪ್ರಚಾರ ನಡೆಸಿತ್ತು. ಚುನಾವಣೆ ವೇಳೆ ಈ ಯೋಜನೆಗಳನ್ನು ಎಲ್ಲರಿಗೂ ಕೊಡಲಾಗುವುದೇ ಎಂಬ ಬಗ್ಗೆ ಸ್ಪಷ್ಟತೆ ಇರಲಿಲ್ಲ. ಆದರೆ, ಚುನಾವಣೆ ನಂತರ 'ಮಾನದಂಡ' ನಿಗದಿ ಪಡಿಸುವುದಾಗಿ ಹಲವು ನಾಯಕರು ಹೇಳಿದ್ದಾರೆ. ಹೀಗಾಗಿ ಕಾಂಗ್ರೆಸ್‌ನ ಗ್ಯಾರಂಟಿಗಳಿಗೆ ಯಾವ 'ಕಂಡೀಷನ್‌ಗಳು' ಇರಲಿವೆ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ.

ಈ ಬಗ್ಗೆ ನಿಯೋಜಿತ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಪ್ರಶ್ನಿಸಿದಾಗ, ಇದು ಡಿ.ಕೆ. ಶಿವಕುಮಾರ್ ಇಲ್ಲವೇ ಸಿದ್ದರಾಮಯ್ಯ ಗ್ಯಾರಂಟಿ ಅಲ್ಲ. ಇದು ಕಾಂಗ್ರೆಸ್ ಪಕ್ಷದ ಗ್ಯಾರಂಟಿ. ನಾವು ಏನು ಮಾತನಾಡಿದ್ದೇವೋ ಅದನ್ನು ಜಾರಿಗೆ ತರಲಿದ್ದೇವೆ ಎಂದಷ್ಟೇ ಹೇಳಿದ್ದಾರೆ.




**ಗ್ಯಾರಂಟಿ ಷರತ್ತುಗಳ ಬಗ್ಗೆ ಇಂದು ನಿರ್ಧಾರ ಸಾಧ್ಯತೆ**

ಅಧಿಕಾರ ವಹಿಸಿಕೊಂಡ ಮೊದಲ ದಿನದ ಸಂಪುಟ ಸಭೆಯಲ್ಲೇ ಎಲ್ಲಾ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರಲಿದ್ದೇವೆ ಎಂದವರು ಪುನರುಚ್ಚರಿಸಿದ್ದಾರೆ. ಹೀಗಾಗಿ ಶನಿವಾರ ಗ್ಯಾರಂಟಿಗಳ ಬಗ್ಗೆ ಸರ್ಕಾರ ಪ್ರಮುಖ ನಿರ್ಧಾರ ತೆಗೆದುಕೊಳ್ಳುವ ನಿರೀಕ್ಷೆ ಇದೆ.

ಕಾಂಗ್ರೆಸ್ ಪ್ರಣಾಳಿಕೆ ಕರಡು ಸಮಿತಿ ಉಪಾಧ್ಯಕ್ಷ ಪ್ರೊ. ಕೆ.ಇ. ರಾಧಾಕೃಷ್ಣನ್ ಅವರ ಪ್ರಕಾರ, ಈ ಯೋಜನೆಗಳಿಗೆ ವರ್ಷಕ್ಕೆ 50 ಸಾವಿರ ಕೋಟಿ ರೂ. ಖರ್ಚಾಗಲಿದೆ. ರಾಜ್ಯದ ಬಜೆಟ್ ಗಾತ್ರ 3 ಲಕ್ಷ ಕೋಟಿ ರೂ. ಆಗಿದೆ. ಈ ಯೋಜನೆಗಳನ್ನು ಜಾರಿಗೆ ತರಬಹುದಾಗಿದೆ. ಆದರೆ, ಬೊಕ್ಕಸಕ್ಕೆ ಹೊರೆಯಾಗಲಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಈ ಹಿನ್ನೆಲೆಯಲ್ಲಿ, ಸರ್ಕಾರದ ಗ್ಯಾರಂಟಿ ಯೋಜನೆಗಳು ಕೇವಲ ಬಿ.ಪಿ.ಎಲ್. ವರ್ಗಕ್ಕೆ ಸೀಮಿತವಾಗಬಹುದು ಎಂದು ಹೆಸರು ಬಹಿರಂಗ ಪಡಿಸಲು ಬಯಸದ ಕೆಲ ಕಾಂಗ್ರೆಸ್ ನಾಯಕರು ಹೇಳಿದ್ದಾರೆ. ಯೋಜನೆಗಳನ್ನು ಬಿ.ಪಿ.ಎಲ್. ವರ್ಗದವರಿಗೆ ಸೀಮಿತವಾಗಿ ಜಾರಿಗೆ ತಂದರೂ ಸಹ, ಸಾಕಷ್ಟು ಉಳಿತಾಯ ಕ್ರಮಗಳನ್ನು ತೆಗೆದುಕೊಳ್ಳ ಬೇಕಾಗುತ್ತದೆ. ಅನಗತ್ಯವಾದ ಸೋರಿಕೆ ತಡೆಯಲು ಕಠಿಣ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ ಎಂದು ಉನ್ನತ ಅಧಿಕಾರಿಗಳು ಹೇಳಿದ್ದಾರೆ.

## ನಿಟ್ಟೂರಿನಲ್ಲಿ ದ್ರೋಣ್ ವಿಮಾನ ಹಾರಾಟ : ಭಯಭೀತರಾದ ಗ್ರಾಮಸ್ಥರು



ಮಲೇಬೆನ್ನೂರು ಮೇ 19 - ಕಿರು ವಿಮಾನವೊಂದು ಶುಕ್ರವಾರ ಬೆಳಗ್ಗೆ 11.30 ರ ಸುಮಾರಿಗೆ ನಿಟ್ಟೂರು ಮತ್ತು ಆದಾಪುರದಲ್ಲಿ ಹಾರಾಡಿದ್ದು, ಗ್ರಾಮಸ್ಥರು ಭಯಭೀತರಾದ ಘಟನೆ ನಡೆದಿದೆ.

ನಿಟ್ಟೂರು ಗ್ರಾಮದ ಆಂಜನೇಯ ದೇವಸ್ಥಾನದ ಬಳಿ ನಾಲ್ಕು ಬಾರಿ ದ್ರೋಣ್ ವಿಮಾನ ಹಾರಾಟ ನಡೆಸಿತು ಎಂದು ಗ್ರಾಮಸ್ಥರು ತಿಳಿಸಿದ್ದಾರೆ. ಸರ್ವೆ ಇಲಾಖೆಯಿಂದ ದ್ರೋಣ್ ಮೂಲಕ ಸರ್ವೇ ಕಾರ್ಯ ನಡೆಸಲಾಗುತ್ತಿದೆ ಎಂದು ಹೇಳಲಾಗಿದೆ.

# ವಿವಿಧ ಮಠಗಳಿಗೆ ಶಾಸಕಿ ಲತಾ ಮಲ್ಲಿಕಾರ್ಜುನ್ ಭೇಟಿ



**ಹರಪನಹಳ್ಳಿ**

ಹರಪನಹಳ್ಳಿ, ಮೇ 19- ಹರಪನಹಳ್ಳಿ ವಿಧಾನಸಭಾ ಕ್ಷೇತ್ರದ ನೂತನ ಶಾಸಕಿ ಎಂ.ಪಿ. ಲತಾ ಮಲ್ಲಿಕಾರ್ಜುನ್ ಅವರು ಕುಟುಂಬ ಸಮೇತರಾಗಿ ರಾಜ್ಯದ ಪ್ರಸಿದ್ಧ ಮಠಗಳಿಗೆ ಭೇಟಿ ನೀಡಿ ಸ್ವಾಮೀಜಿಯವರ ಆಶೀರ್ವಾದ ಪಡೆದರು.

ಚುನಾವಣೆ ಪೂರ್ವದಲ್ಲಿ ಕ್ಷೇತ್ರದಾದ್ಯಂತ ಮತ ಯಾಚನೆಯಲ್ಲಿ ತೊಡಗಿಕೊಂಡಿದ್ದ ಎಂ.ಪಿ. ಲತಾ ಮಲ್ಲಿಕಾರ್ಜುನ್ ಅವರು ಶಾಸಕಿಯಾಗಿ ಆಯ್ಕೆಯಾದ ಬಳಿಕ ಪತಿ ಮಲ್ಲಿಕಾರ್ಜುನ್, ಪುತ್ರ ಗೌತಮ್ ಪ್ರಭು ಅವ ರೊಟ್ಟಿಗೆ ವಿವಿಧ ಮಠಗಳಿಗೆ ಭೇಟಿ ನೀಡಿದ್ದಾರೆ.

ರಾಜನಹಳ್ಳಿಯ ಶ್ರೀ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿ, ಮೈಸೂರಿನ ಸುತ್ತೂರು ಸಂಸ್ಥಾನದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ತುಮಕೂರಿನ ಸಿದ್ದಗಂಗಾ ಮಠದ ಶ್ರೀ ಸಿದ್ದಲಿಂಗ ಸ್ವಾಮೀಜಿಯವರ ಮಠಗಳಿಗೆ ತೆರಳಿ ಸ್ವಾಮೀಜಿಗಳಿಗೆ ಫಲ-ಪುಷ್ಪ ಕೊಟ್ಟು ಗೆಲುವಿನ ಸಂತಸ ಹಂಚಿಕೊಂಡರು.

ಈ ವೇಳೆ ಎಂ.ಪಿ. ಲತಾ ಮಲ್ಲಿಕಾರ್ಜುನ್ ಮಾತನಾಡಿ, ವಿವಿಧ ಮಠಾಧೀಶರ ಆಶೀರ್ವಾದ ಪಡೆದು ಕ್ಷೇತ್ರದ ಹಿತ ಹಾಗೂ ಅಭಿವೃದ್ಧಿ ದೃಷ್ಟಿಯಿಂದ ಅವರಿಂದ ಸಲಹೆ, ಮಾರ್ಗದರ್ಶನ ಪಡೆಯುತ್ತಿರುವೆ ಎಂದು ತಿಳಿಸಿದರು.

## ಕಾಂಗ್ರೆಸ್ ರಾಜಕೀಯವಾಗಿ ಅಪ್ರಬುದ್ಧ : ಎಲ್‌ಡಿಎಫ್ ತರಾಟೆ

**ಸಿದ್ದು ಪ್ರಮಾಣಕ್ಕೆ ವಿಜಯನ್‌ಗೆ ಆಹ್ವಾನವಿಲ್ಲ**

ಕಣ್ಣೂರು (ಕೇರಳ), ಮೇ 19 - ಕರ್ನಾಟಕದ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಪ್ರಮಾಣ ವಚನ ಸ್ವೀಕರಿಸುವ ಕಾರ್ಯಕ್ರಮಕ್ಕೆ ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರನ್ನು ಆಹ್ವಾನಿಸದೇ ಇರುವುದಕ್ಕೆ ಕಾಂಗ್ರೆಸ್ ಪಕ್ಷವನ್ನು ಆಡಳಿತಾರೂಢ ಎಲ್.ಡಿ.ಎಫ್. ಟೀಕಿಸಿದೆ.

ಪಕ್ಕದ ತಮಿಳುನಾಡಿನ ಎಂ.ಕೆ. ಸ್ಟಾಲಿನ್ ಸೇರಿದಂತೆ ಹಲವು ರಾಜ್ಯಗಳ ಮುಖ್ಯಮಂತ್ರಿಗಳನ್ನು ಪ್ರಮಾಣ ವಚನ ಸ್ವೀಕಾರ ಸಮಾರಂಭಕ್ಕೆ ಆಹ್ವಾನಿಸಲಾಗಿತ್ತು.

ಕೇರಳದ ಮುಖ್ಯಮಂತ್ರಿಯನ್ನು ಆಹ್ವಾನಿಸದೇ ಇರುವ ಕಾಂಗ್ರೆಸ್ ಕ್ರಮ ನೋಡಿದಾಗ, ಆ ಪಕ್ಷ ರಾಜಕೀಯವಾಗಿ ಅಪ್ರಬುದ್ಧ ಹಾಗೂ ದೌರ್ಬಲ್ಯ ಹೊಂದಿದೆ ಎಂಬುದು ಸ್ಪಷ್ಟವಾಗುತ್ತದೆ ಎಂದು ಎಲ್.ಡಿ.ಎಫ್. ಸಂಚಾಲಕರಾದ ಇ.ಪಿ. ಜಯರಾಜನ್ ತಿಳಿಸಿದ್ದಾರೆ.

ಕಾಂಗ್ರೆಸ್ ಪಕ್ಷ ಈಗ ದೇಶದಲ್ಲಿ ಯಾವ ರೀತಿಯ ಬಿಜೆಪಿ ವಿರೋಧಿ ನಿಲುವು ತಳೆಯಲಿದೆ? ಬಿಜೆಪಿ ವಿರೋಧಿ ಶಕ್ತಿಗಳನ್ನು ಒಗ್ಗೂಡಿಸಲು ಕಾಂಗ್ರೆಸ್‌ಗೆ ಸಾಧ್ಯವಾಗದು ಎಂಬುದನ್ನು ಇದು ತೋರಿಸುತ್ತದೆ ಎಂದಿದ್ದಾರೆ.

# ಪ್ರಮಾಣ ವಚನದ ವೇಳೆ ಶಕ್ತಿ ಪ್ರದರ್ಶನ

**ಲೋಕಸಭಾ ಚುನಾವಣೆಗೆ ಬಿಜೆಪಿಯೇತರ ಪಕ್ಷಗಳ ಜಮಾವಣೆ**

ಬೆಂಗಳೂರು, ಮೇ 19 - ಮುಂಬರುವ ಲೋಕಸಭಾ ಚುನಾವಣೆಗೆ ಬಿಜೆಪಿಯೇತರ ಪಕ್ಷಗಳನ್ನು ಒಂದೇ ಸೂರಿನಡಿಗೆ ತರಲು ನಾಳೆ ನಗರದಲ್ಲಿ ನಡೆಯಲಿರುವ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಅವರು ಪ್ರಮಾಣ ವಚನ ಸ್ವೀಕರಿಸಲಿರುವ ಸಮಾರಂಭವನ್ನೇ ಪರ್ಯಾಯ ಶಕ್ತಿಯ ವೇದಿಕೆಯನ್ನಾಗಿ ಕಾಂಗ್ರೆಸ್ ರೂಪಿಸುತ್ತಿದೆ.

ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪ್ರಚಂಡ ಬಹುಮತದಿಂದ ಅಧಿಕಾರಕ್ಕೆ ಬಂದಿರುವ ರೀತಿಯಲ್ಲೇ ಲೋಕಸಭಾ ಚುನಾವಣೆಗೂ ಬಿಜೆಪಿಯೇತರ ಶಕ್ತಿಗಳು ಜಯಭೇರಿ ಭಾರಿಸಲು ಈ ವೇದಿಕೆಯನ್ನು ಅಸ್ತ್ರವಾಗಿ ಬಳಕೆ ಮಾಡಿಕೊಳ್ಳುತ್ತಿದೆ.

ಸಿದ್ದರಾಮಯ್ಯ, ಶಿವಕುಮಾರ್ ಸೇರಿದಂತೆ ಪಕ್ಷದ ನೂತನ ಸಚಿವರು ನಗರದ ಕಂಠೀರವ ಕ್ರೀಡಾಂಗಣದಲ್ಲಿ ನಡೆಯಲಿರುವ ಜನಸ್ತೋಮ ಸಭೆಯಲ್ಲಿ ಅಧಿಕಾರ ಸ್ವೀಕರಿಸಲಿದ್ದಾರೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಮಾರ್ಗದರ್ಶನದಂತೆ ಪ್ರಮಾಣ ವಚನ ಸ್ವೀಕಾರ ಸಮಾರಂಭ ನಡೆಯುತ್ತಿದೆ.

ಈ ಸಮಾರಂಭದಲ್ಲಿ ರಾಷ್ಟ್ರೀಯ ಕಾಂಗ್ರೆಸ್ ನಾಯಕರಲ್ಲದೆ, ಆ ಪಕ್ಷದ ಉಳಿದ ರಾಜ್ಯಗಳಲ್ಲಿ ಅಧಿಕಾರದಲ್ಲಿರುವ ಮುಖ್ಯಮಂತ್ರಿಗಳು ಮತ್ತು ಬಿಜೆಪಿಯೇತರ ಆಡಳಿತವಿರುವ ಮುಖ್ಯಮಂತ್ರಿಗಳು ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಭಾಗವಹಿಸುತ್ತಿದ್ದಾರೆ.

ಇದಕ್ಕಾಗಿ ಬೃಹತ್ ವೇದಿಕೆಯನ್ನೇ ಸೃಷ್ಟಿ ಮಾಡಲಾಗಿದೆ. ಈ ವೇದಿಕೆ ಮೂಲಕ ಬಿಜೆಪಿಗೆ ಪರೋಕ್ಷ ಎಚ್ಚರಿಕೆ ನೀಡುವ ಉದ್ದೇಶದಿಂದ ಕಾಂಗ್ರೆಸ್ ಗಣ್ಯಾತಿಗಣ್ಯರಿಗೆ ಆಹ್ವಾನ ನೀಡಿದೆ.

ಪ್ರಮಾಣ ವಚನ ಸಮಾರಂಭದಲ್ಲಿ ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಪ್ರಿಯಾಂಕ ಗಾಂಧಿ ಅವರಲ್ಲದೆ, ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್, ತಮಿಳುನಾಡಿನ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್, ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಸೇರಿದಂತೆ ದೇಶದ ಹಲವು ರಾಜ್ಯಗಳ ಮುಖ್ಯಮಂತ್ರಿಗಳು ಭಾಗವಹಿಸಲಿದ್ದಾರೆ.

ರಾಜಸ್ತಾನದ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್, ಛತ್ತೀಸ್‌ಘಡ ಮುಖ್ಯಮಂತ್ರಿ ಭೂಪೇಶ್ ಭಾಗೆಲ್, ಹಿಮಾಚಲ ಪ್ರದೇಶದ ಮುಖ್ಯಮಂತ್ರಿ ಸುಖ್ವಿಂದರ್ ಸಿಂಗ್ ಸುಖು, ಪಾಂಡಿಚೇರಿಯ ಮುಖ್ಯಮಂತ್ರಿ ಎನ್. ರಂಗಸ್ವಾಮಿ ಅವರುಗಳು ಆಗಮಿಸಲಿದ್ದಾರೆ.

ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಈ ಮೊದಲು ಸಮಾರಂಭಕ್ಕೆ ಆಗಮಿಸಲು ಸಮ್ಮತಿಸಿದ್ದರು. ಆದರೆ, ಕೊನೆ ಗಳಿಗೆಯಲ್ಲಿ ತಮ್ಮ ಬದಲಿಗೆ ಟಿಎಂಸಿ ಪ್ರತಿನಿಧಿಯಾಗಿ ಹಿರಿಯ ನಾಯಕ ಕಾಕೋಲಿ ಘೋಷ್ ದಸ್ತಿದಾರ್ ಅವರನ್ನು ಕಳುಹಿಸುತ್ತಿದ್ದಾರೆ.

ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರು ಖುದ್ದಾಗಿ ಬಿಜೆಪಿಯೇತರ ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ವಿವಿಧ ರಾಜ್ಯಗಳಲ್ಲಿರುವ ನಾಯಕರನ್ನು ಪ್ರಮಾಣ ವಚನ ಸ್ವೀಕಾರ ಸಮಾರಂಭಕ್ಕೆ ಆಹ್ವಾನಿಸಿದ್ದಾರೆ.

ಭಾರೀ ಸಂಖ್ಯೆಯಲ್ಲಿ ಪಕ್ಷದ ಕಾರ್ಯಕರ್ತರು, ಅಭಿಮಾನಿಗಳು ಆಗಮಿಸುವ ಹಿನ್ನೆಲೆಯಲ್ಲಿ ಕ್ರೀಡಾಂಗಣಕ್ಕೆ ಸೂಕ್ತ ಪೊಲೀಸ್ ಭದ್ರತೆ ಒದಗಿಸಲಾಗಿದೆ. ಅತಿ ಗಣ್ಯರು, ಗಣ್ಯರಿಗೆ ಪ್ರತ್ಯೇಕ ಪ್ರವೇಶ ಹಾಗೂ ಆಸನದ ವ್ಯವಸ್ಥೆ ಮಾಡಲಾಗಿದೆ.

ಸಾರ್ವಜನಿಕರಿಗೂ ಸಾಕಷ್ಟು ಅವಕಾಶ ಕಲ್ಪಿಸಿದ್ದು, ಪ್ರಮಾಣ ವಚನ ಸ್ವೀಕಾರಕ್ಕೆ ಕ್ರೀಡಾಂಗಣವನ್ನು ಸಕಲ ರೀತಿಯಲ್ಲೂ ಸಜ್ಜುಗೊಳಿಸಲಾಗಿದೆ.


ಬಾಪೂಜಿ ಕ್ಯಾನ್ಸರ್ ಹಾಸ್ಪಿಟಲ್ ಟ್ರಸ್ಟ್





ವಿಶ್ವಾರಾಧ್ಯ ಕ್ಯಾನ್ಸರ್ ಆಸ್ಪತ್ರೆ & ಸಂಶೋಧನಾ ಸಂಸ್ಥೆ
ಆವರಗೆರೆ, ಪಿ.ಬಿ.ರಸ್ತೆ, ದಾವಣಗೆರೆ-577003 ಮೊ: 98444 58881, 98444 76663

ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ

ಇದೀಗ ನಿಮ್ಮ ದಾವಣಗೆರೆಯ ವಿಶ್ವಾರಾಧ್ಯ ಕ್ಯಾನ್ಸರ್ ಆಸ್ಪತ್ರೆಯ ನುರಿತ ಕ್ಯಾನ್ಸರ್ ತಜ್ಞವೈದ್ಯರಿಂದ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರವನ್ನು ಆಯೋಜಿಲಾಗಿದೆ. ಸಾರ್ವಜನಿಕರು ಈ ಶಿಬಿರದ ಪ್ರಯೋಜನವನ್ನು ಪಡೆದುಕೊಳ್ಳಬೇಕು.




ರೋಗದ ಲಕ್ಷಣಗಳು

- ದೀರ್ಘಕಾಲ ಮಾಯದ ಹುಣ್ಣು
- ಗಡ್ಡೆಯ ತ್ವರಿತ ಬೆಳವಣಿಗೆ
- ಧ್ವನಿಯ ಬದಲಾವಣೆ
- ಥೈರಾಡ ಗಡ್ಡೆ
- ನುಂಗಲು ತೊಂದರೆ
- ಮುಟ್ಟು ನಿಂತ ಮೇಲೆ ಪುನಃ ಅನಿಯಮಿತ ಮುಟ್ಟಾಗುವುದು
- ಸ್ಥನದಲ್ಲಿ ಗಂಟು
- ಮೈ ತೂಕ ಕಡಿಮೆಯಾಗುವುದು
- ವಿಪರಿತ ಮೈಕೈ ನೋವು, ಸುಸ್ತು
- ವಿಪರಿತ ಕೆಮ್ಮು, ಕಫ, ದಮ್ಮು
- ಹೊಟ್ಟೆಯ ಕೆಳಭಾಗದಲ್ಲಿ/ ಗುದದ್ವಾರದಲ್ಲಿ ಗಂಟು

- ಡಾ|| ಜಗದೀಶ ತುಬಚಿ MS(ENT & HNS), FHNS
- ಡಾ|| ಚನ್ನಬಸಪ್ಪ ಕೋರಿ MS, M.Ch.
- ಡಾ|| ರಾಜೀವ ಎ.ಜಿ M.D.
- ಡಾ|| ತೇಜಸ್ ಎ ಯಳಮಲಿ BDS, MDS, (Max, Surg), FHNS.

ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ

ಸ್ಥಳ: ವಿಶ್ವಾರಾಧ್ಯ ಕ್ಯಾನ್ಸರ್ ಆಸ್ಪತ್ರೆ & ಸಂಶೋಧನಾ ಸಂಸ್ಥೆ ಆವರಗೆರೆ, ಪಿ.ಬಿ.ರಸ್ತೆ, ದಾವಣಗೆರೆ.

ದಿನಾಂಕ: 20-05-2023 ನೇ ಶನಿವಾರ
ಸಮಯ: ಬೆಳಗ್ಗೆ 9.00 ರಿಂದ ಮಧ್ಯಾಹ್ನ 3.00ರವರೆಗೆ.

ಸಂಪರ್ಕಿಸಿ: 9844458881, 97424 55516

ಈ ಆಸ್ಪತ್ರೆಯಲ್ಲಿ ಎ.ಬಿ.ಆರ್.ಕೆ., ಯಶಸ್ವಿನಿ, ಈ.ಎಸ್.ಐ., ಬಿ.ಪಿ.ಎ., ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ.

ಸೂಚನೆ: ವಿಶೇಷವಾಗಿ ತಂಬಾಕು, ಗುಟಕಾ ತಿನ್ನುವವರು/ಬೀಡಿ, ಸಿಗರೇಟ್ ಸೇದುವವರು ಭಾಗವಹಿಸಬೇಕು

# ಸಿದ್ದರಾಮಯ್ಯಗೆ ಮತ್ತಷ್ಟು ಶಕ್ತಿ ತುಂಬಿದ ದಾವಣಗೆರೆಯ ಸಿದ್ದರಾಮೋತ್ಸವ

**ಜಿಗಳಿ ಪ್ರಕಾಶ್**

ಮಧ್ಯ ಕರ್ನಾಟಕದ ಹೆಬ್ಬಾಗಿಲಾಗಿರುವ ದಾವಣಗೆರೆಯು ರಾಜಕಾರಣದ ಇತಿಹಾಸದಲ್ಲಿ ಎಲ್ಲಾ ಪಕ್ಷಗಳಿಗೂ ಅದೃಷ್ಟದ ನೆಲವಾಗಿದೆ. ಕಾಂಗ್ರೆಸ್, ಬಿಜೆಪಿ ಸೇರಿದಂತೆ ಹಲವು ಪಕ್ಷಗಳು ನಂಬಿರುವುದು ಹಳೆಯ ವಿಚಾರವಾದರೂ ಸಿದ್ದರಾಮಯ್ಯ ಅವರು ಮತ್ತೊಮ್ಮೆ ರಾಜ್ಯದ ಮುಖ್ಯಮಂತ್ರಿಯಾಗಿ ಆಯ್ಕೆ ಆಗಲು ದಾವಣಗೆರೆ ಮಣ್ಣಿನಲ್ಲಿ ನಡೆದ ಸಿದ್ದರಾಮೋತ್ಸವ ಅಂದರೆ ತಪ್ಪಾಗುವುದಿಲ್ಲ.

ರಾಹುಲ್ ಗಾಂಧಿ ಅವರು ಕೂಡ ಬೆಣ್ಣೆನಗರಿ ದಾವಣಗೆರೆಯಲ್ಲಿ ನಡೆದ ಸಿದ್ದರಾಮೋತ್ಸವದಲ್ಲಿ ಸೇರಿದ್ದ ಜನರನ್ನು ಕಂಡು ಬೆರಗಾಗಿದ್ದರು. ರಾಜ್ಯದ ಇತಿಹಾಸದಲ್ಲಿ ನಾಯಕನೊಬ್ಬನ ಹುಟ್ಟುಹಬ್ಬ ಆಚರಣೆಗೆ ಸಿಕ್ಕ ಸ್ಪಂದನೆ, ಸೇರಿದ ಜನಸ್ತೋಮ ಎಂದಿಗೂ ಅವಿಸ್ಮರಣೀಯ. ಮಾಜಿ ಸಿಎಂ ಬಂಗಾರಪ್ಪ ಅವರು ಕೆಸಿಪಿ ಪಕ್ಷದ ಸಮಾವೇಶ ಮಾಡಿದಾಗಅಂದುಕೂಡಾಜನಸ್ತೋಮವೇ ಸೇರಿತ್ತು. ಸಿದ್ದರಾಮೋತ್ಸವದ ಯಶಸ್ಸು ಅದಕ್ಕಿಂತ ದೊಡ್ಡ ಇತಿಹಾಸ ಸೃಷ್ಟಿಸಿತ್ತು.

ದಾವಣಗೆರೆಯಲ್ಲಿ 2022ರ ಆಗಸ್ಟ್ 03 ರಂದು ನಡೆದ ಸಿದ್ದರಾಮಯ್ಯನವರ 75ನೇ ವರ್ಷದ ಅಮೃತ ಮಹೋತ್ಸವಕ್ಕೆ ರಾಜ್ಯದ ನಾನಾ ಮೂಲೆಗಳಿಂದ ಲಕ್ಷಾಂತರ ಜನರು ಆಗಮಿಸಿದ್ದರು. ಈ ಜನಸಾಗರ ಕಂಡು ಸ್ವತಃ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅಚ್ಚರಿಪಟ್ಟಿದ್ದರು. ಅಲ್ಲದೇ ಮಳೆ ನಡುವೆಯೂ ಜನರು ಬಂದಿದ್ದು ಸಂಘಟಕರ ನಿರೀಕ್ಷೆಗೂ ಹೆಚ್ಚಿನದ್ದಾಗಿತ್ತು.

ಕಾಂಗ್ರೆಸ್‌ಗೆ ನವಚೈತನ್ಯ ತಂದು ಕೊಟ್ಟಿದ್ದೇ ಸಿದ್ದರಾಮೋತ್ಸವ ಎಂದರೆ ತಪ್ಪಾಗುವುದಿಲ್ಲ. ಆಗ ಬಿಜೆಪಿ ಸರ್ಕಾರ ಅಧಿಕಾರದಲ್ಲಿತ್ತು. ಆದರೂ ವಿರೋಧ ಪಕ್ಷದ ನಾಯಕನ ಹುಟ್ಟುಹಬ್ಬಕ್ಕೆ ಜನರು ಸೇರಿದ್ದ ಪರಿ ಅಧಿಕಾರದಲ್ಲಿದ್ದ ನಾಯಕರ ಹುಬ್ಬೇರುವಂತೆ ಮಾಡಿತ್ತು. ಹತ್ತಕ್ಕೂ ಹೆಚ್ಚು ಕಿಲೋ ಮೀಟರ್‌ವರೆಗೆ ಜನವೋ ಜನ, ರಾಹುಲ್ ಗಾಂಧಿ, ಶಾಮನೂರು ಶಿವಶಂಕರಪ್ಪ, ಎಸ್.ಎಸ್.ಮಲ್ಲಿಕಾರ್ಜುನ್, ವೀರಪ್ಪ ಮೊಯ್ಲಿ ಸೇರಿದಂತೆ ಹಲವು ನಾಯಕರು ಸಮಾವೇಶದ ಸ್ಥಳಕ್ಕೆ ಬರಲು ಹರಸಾಹಸ ಪಡಬೇಕಾಯಿತು. ಅಂದು ಸಿದ್ದರಾಮಯ್ಯ ಅವರ ಜನಪ್ರಿಯತೆ



ಅನಾವರಣ ಗೊಂಡಿತು.

ಇನ್ನು ಸಿದ್ದರಾಮಯ್ಯ ಅವರು ಕಾರಿನಲ್ಲಿ ಕುಳಿತು ವೇದಿಕೆಯತ್ತ ಸಾಗುವವರೆಗೆ ಜನರು ಎರಡೂ ಬದಿಯಲ್ಲಿ ನಿಂತು ಜೈ ಘೋಷಗಳನ್ನು ಮೊಳಗಿಸಿದ್ದರು. ವೇದಿಕೆಯಲ್ಲಿ ಮಾತನಾಡಿದ್ದ ಪ್ರತಿಯೊಬ್ಬ ರಾಜ್ಯ ಕಾಂಗ್ರೆಸ್ ನಾಯಕರು ನಾವು ಇಷ್ಟೊಂದು ಜನರನ್ನು ಯಾವ ಕಾರ್ಯಕ್ರಮದಲ್ಲೂ ನೋಡಿರಲಿಲ್ಲ, ಕಂಡಿರಲಿಲ್ಲ. ವೇದಿಕೆಗೆ ಬರಲು ಇಷ್ಟೊಂದು ಕಷ್ಟ ಪಟ್ಟಿರಲಿಲ್ಲ. ಅಷ್ಟರ ಮಟ್ಟಿಗೆ ಸಿದ್ದರಾಮಯ್ಯ ಅವರ ಜನಪ್ರಿಯತೆ, ಶಕ್ತಿ, ವಿರಾಟ್ ರೂಪ ಅನಾವರಣಗೊಂಡಿದ್ದು ದಾವಣಗೆರೆ ನೆಲದಲ್ಲಿ ಎಂಬುದು ವಿಶೇಷವಾಗಿದೆ ಎಂದಿದ್ದರು.

ರಾಹುಲ್ ಗಾಂಧಿ ಮಾತನಾಡಿ, ನಾನು ಸಾಮಾನ್ಯವಾಗಿ ಯಾರ ಹುಟ್ಟುಹಬ್ಬಕ್ಕೂ ಹೋಗುವುದಿಲ್ಲ. ಸಿದ್ದರಾಮಯ್ಯ ಅವರ ಬಗ್ಗೆ ನನಗೆ ವಿಶೇಷ ಪ್ರೀತಿಯಿದೆ. ಆ ಕಾರಣಕ್ಕೆ ಬಂದಿದ್ದೇನೆ. ಇಷ್ಟೊಂದು ಸಂಖ್ಯೆಯಲ್ಲಿ ಸೇರಿರುವ ಜನರಿಗೆ ಧನ್ಯವಾದ ಅರ್ಪಿಸುತ್ತೇನೆ ಎಂದಿದ್ದರು. ಅಲ್ಲದೇ ಇದೇ ವೇಳೆ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ನಡುವಿನ ಕಂದಕ ಸರಿಮಾಡುವ ಪ್ರಯತ್ನ ಮಾಡಿದ್ದರು. ನಂತರ ಇಬ್ಬರು ತಬ್ಬಿಕೊಂಡು ಒಗ್ಗಟ್ಟಿನ ಸಂದೇಶವನ್ನೂ ರವಾನಿಸಿದ್ದರು.

ಡಿ.ಕೆ.ಶಿವಕುಮಾರ್ ತಮ್ಮ ಭಾಷಣದ ಆರಂಭದಲ್ಲಿ ಸಿದ್ದರಾಮಯ್ಯ ಅವರ ಹೆಸರು ಹೇಳುತ್ತಿದ್ದಂತೆಯೇ ಕಾಂಗ್ರೆಸ್ ಕಾರ್ಯಕರ್ತರು, ಸಿದ್ದರಾಮಯ್ಯರ ಅಭಿಮಾನಿಗಳು ಮುಗಿಲು ಮುಟ್ಟುವಂತೆ ಹುಚ್ಚೆದ್ದು ಕುಣಿದರು. ಇದರ ಜೊತೆಗೆ ಸಿದ್ದರಾಮಯ್ಯ ಪರ ಜೈಘೋಷಗಳನ್ನು ಹಾಕಿದರು.

ಹೀಗೆ ಸಿದ್ದರಾಮಯ್ಯ ಅವರ ಪರ ಜೈಕಾರ ಹಾಕಿದ್ದಕ್ಕೆ ವೇದಿಕೆಯಲ್ಲಿದ್ದ ನಾಯಕರೆಲ್ಲರೂ ಬೆರಗಾಗಿದ್ದರು. ಆಗ ರಾಹುಲ್ ಗಾಂಧಿ ಅವರು ಜನರತ್ತ ಮತ್ತೆ ಮತ್ತೆ ನೋಡತೊಡಗಿದರು. ಎಲ್ಲಿ ನೋಡಿದರೂ ಜನರ ಶಿಳ್ಳೆ, ಚಪ್ಪಾಳೆಯದ್ದೇ ಸದ್ದು ಮೊಳಗಿತ್ತು. ಅಲ್ಲದೇ ಸಿದ್ದರಾಮಯ್ಯ ಅವರ ಮೇಲೆ ಜನರು ತೋರಿದ ಪ್ರೀತಿಗೆ ರಾಹುಲ್ ಗಾಂಧಿ ಅವರು ನಿಬ್ಬೆರಗಾಗಿದ್ದರು.

ನಂತರ ಸಿದ್ದರಾಮಯ್ಯ ಅವರು ಭಾಷಣಕ್ಕೆ ಬಂದು ನಿಂತಾಗಲೂ ಜನರು ಹುಚ್ಚೆದ್ದು ಕುಣಿದರು. ಹಾಗೆಯೆ ಸಿದ್ದರಾಮಯ್ಯರು ಎಲ್ಲೇ ಹೋದರೂ ಸಿದ್ದರಾಮಯ್ಯ ಕೀ ಜೈ, ಸಿದ್ದರಾಮಯ್ಯ ಕೀ ಜೈ ಎಂಬ ಘೋಷಣೆಗಳು ಮುಗಿಲು ಮುಟ್ಟಿದ್ದವು. ಎಷ್ಟೋ ವೇದಿಕೆಯಲ್ಲಿ ಡಿ.ಕೆ.ಶಿವಕುಮಾರ್ ಅವರು ಸಿದ್ದರಾಮಯ್ಯ ಅವರ ಹೆಸರು ಹೇಳುತ್ತಿದ್ದಂತೆ ಜನರಿಂದ ಕೇಕೆ, ಚಪ್ಪಾಳೆಯ ಸದ್ದು ಕೇಳಿಬರುತ್ತಿತ್ತು. ಸಿದ್ದರಾಮೋತ್ಸವದ ಬಳಿಕ ರಾಹುಲ್ ಗಾಂಧಿ ಅವರೂ ಸಹ ಸಿದ್ದರಾಮಯ್ಯ ಅವರ ಜನಶಕ್ತಿ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದರು. ರಾಹುಲ್ ಗಾಂಧಿ ಅವರು ಎಲ್ಲರೂ ಒಟ್ಟಾಗಿದ್ದೇವೆ ಎಂಬ ಸಂದೇಶ ಸಾರುವ ಸಲುವಾಗಿ ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ನಾಯಕತ್ವದಲ್ಲಿ 2023ರ ವಿಧಾನಸಭೆ ಚುನಾವಣೆ ಎದುರಿಸುತ್ತೇವೆ ಎಂದು ಹೇಳಿದ್ದೂ ಸಹ ದಾವಣಗೆರೆ ನೆಲದಲ್ಲಿಯೇ ಎಂಬುದು ವಿಶೇಷ.

ಸಿದ್ದರಾಮಯ್ಯರಿಗೂ ಕೂಡಾ ಅಷ್ಟೇ ಇಷ್ಟವಾದ ನೆಲವೆಂದರೆ ದಾವಣಗೆರೆ. ಜೆಡಿಎಸ್‌ನಿಂದ ಹೊರಬಂದು ಅಹಿಂದ ಸಮಾವೇಶ ಮಾಡಿದಾಗಲೂ ದಾವಣಗೆರೆಯಲ್ಲಿ ಸಿಕ್ಕ ಅಭೂತಪೂರ್ವ ಸ್ಪಂದನೆ ಇಂದಿಗೂ ಮರೆತಿಲ್ಲ. ಅದೇ ರೀತಿಯಲ್ಲಿ ಸಿದ್ದರಾಮೋತ್ಸವದ ಯಶಸ್ಸು, ಜನಸ್ಪಂದನೆ, ಜನಸ್ತೋಮವೂ ಇದಕ್ಕೆ ಸಾಕ್ಷಿ ಆಗಿದೆ.

ದಾವಣಗೆರೆ ಜಿಲ್ಲೆಯಲ್ಲಿ ಲಿಂಗಾಯತ ಸಮುದಾಯ ಹೊರತುಪಡಿಸಿದರೆ, ಹೆಚ್ಚು ಜನಸಂಖ್ಯೆ ಇರುವ ಸಮಾಜಗಳಲ್ಲಿ ಕುರುಬ ಸಮಾಜವೂ ಒಂದಾಗಿದೆ. ಹರಿಹರ, ದಾವಣಗೆರೆ, ಹೊನ್ನಾಳಿ, ಚನ್ನಗಿರಿ ಸೇರಿದಂತೆ ಬೇರೆ ಬೇರೆ ತಾಲ್ಲೂಕುಗಳಲ್ಲಿಯೂ ಈ ಸಮಾಜದ ಪಾರುಪತ್ಯ ಇದೆ. ಸಿದ್ದರಾಮಯ್ಯ ಅವರು ಸಿಎಂ ಆಗುತ್ತಾರೆ ಎಂಬ ಕಾರಣಕ್ಕೆ ಈ ಸಮಾಜವು ರಾಜ್ಯದಲ್ಲಿ ಕಾಂಗ್ರೆಸ್ ಕೈ ಹಿಡಿದಿದೆ. ಇದರಿಂದಾಗಿ ದಾವಣಗೆರೆ ಜಿಲ್ಲೆಯ ಆರು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಗೆಲ್ಲಲು ಇತರೆ ಸಮಾಜಗಳ ಹಾಗೂ ಈ ಸಮಾಜದ ಬೆಂಬಲ ಮುಖ್ಯವಾಗಿದ್ದು, ಇದನ್ನು ಅಲ್ಲಗಳೆಯುವಂತಿಲ್ಲ.

# ನಗರದಲ್ಲಿ ಸ್ಟಾರ್ಟ್ ಅಪ್ ಪಾರ್ಕ್ : ವಿಟಿಯು ಕುಲಪತಿ



**(1ನೇ ಪುಟದಿಂದ)** ಸಮೀಪ ಯುಬಿಡಿಟಿ ಕಾಲೇಜಿಗೆ ಸೇರಿದ್ದ 8 ಎಕರೆ ಪ್ರದೇಶದಲ್ಲಿ ಸ್ಟಾರ್ಟ್ ಅಪ್ ಪಾರ್ಕ್ ನಿರ್ಮಿಸಲು ಉದ್ದೇಶಿಸಲಾಗಿದೆ. ಒಂದು ವಾರದೊಳಗೆ ವಿವಿಯ ಕೌನ್ಸಿಲ್ ಸದಸ್ಯರೊಂದಿಗೆ ಚೆನ್ನೈಗೆ ತೆರಳಿ ಅಲ್ಲಿನ ಐ.ಐ.ಟಿ.ಯಲ್ಲಿರುವ ನವೋದ್ಯಮ ಕೇಂದ್ರವನ್ನು ವೀಕ್ಷಿಸಿ, ಅದರಂತೆಯೇ ಇಲ್ಲಿಯೂ ನಿರ್ಮಿಸಲಾಗುವುದು ಎಂದರು.

ಶೀಘ್ರವೇ ಆನ್‌ಲೈನ್ ಮೂಲಕ ಪದವಿ ಕಲಿಯಲು ಅವಕಾಶ ಮಾಡಿಕೊಡಲಾಗುವುದು. ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಉತ್ತೀರ್ಣರಾದ ಯಾವ ವಿದ್ಯಾರ್ಥಿಯೂ ಉದ್ಯೋಗವಿಲ್ಲದೆ ಮರಳ ಬಾರದು ಎಂಬ ನಿಟ್ಟಿನಲ್ಲಿ ವಿಟಿಯು ಹಲವಾರು ಕ್ರಮಗಳನ್ನು ಕೈಗೊಂಡಿದೆ.

ವಿದ್ಯಾರ್ಥಿಗಳು ಉದ್ಯೋಗ ಪಡೆಯುವ ಜೊತೆಗೆ ಉದ್ಯೋಗ ನೀಡುವಂತೆಯೂ ಆಗಬೇಕು ಎಂದು ಆಶಿಸಿದರು.

ಪರೀಕ್ಷೆ ಮುಗಿದ ವಾರದಲ್ಲಿಯೇ ಫಲಿತಾಂಶ ನೀಡುವ ಮೂಲಕ ವಿಟಿಯು ದೇಶದಲ್ಲಿಯೇ ದಾಖಲೆ ನಿರ್ಮಿಸಿದೆ. ಶೀಘ್ರ ಫಲಿತಾಂಶ ವಿದ್ಯಾರ್ಥಿಗಳಿಗೆ ಸಹಕಾರಿಯಾಗಲಿದೆ ಎಂದರು.

ದಾವಣಗೆರೆಯಲ್ಲಿ ಕಾಲೇಜಿನ ಹಾಸ್ಟೆಲ್ ಪರಿಶೀಲಿಸಿದ್ದೇನೆ, ಹಲವಾರು ಕೊರತೆಗಳಿರುವುದು ಕಂಡು ಬಂದಿದೆ. ಹಾಸ್ಟೆಲ್ ವಿಸ್ತರಿಸುವಂತೆಯೂ ಸೂಚಿಸಿರುವುದಾಗಿ ಹೇಳಿದ ಅವರು, ಕಾಲೇಜಿನ ಹಿರಿಯ ವಿದ್ಯಾರ್ಥಿಗಳು ಕಾಲೇಜಿನ ಅಭಿವೃದ್ಧಿಗೆ ಕೈ ಜೋಡಿಸಬೇಕು ಎಂದು ಹೇಳಿದರು.

ನಾಲ್ಕು ವರ್ಷ ನೀವು ಸಂಪಾದಿಸಿದ ತಾಂತ್ರಿಕ ಜ್ಞಾನ ಮುಂದಿನ ದಿನಗಳಲ್ಲಿ ಹಳೆಯದಾಗಿರುತ್ತದೆ. ಪ್ರತಿ ನಿತ್ಯವೂ ತಂತ್ರಜ್ಞಾನ ಬದಲಾಗುತ್ತಿರುತ್ತದೆ. ಈ ನಿಟ್ಟಿನಲ್ಲಿ ನಿತ್ಯವೂ ಕಲಿಕೆಯ ದಿನವಾಗಿದೆ. ಬದಲಾದ ತಂತ್ರಜ್ಞಾನಗಳಿಗೆ ಅಪ್‌ಡೇಟ್ ಆಗಬೇಕಿದೆ ಎಂದರು.

ಮೂರು ದಿನಗಳ ಕಾಲ ನಡೆಸಲಾಗುತ್ತಿದ್ದ ವಾರ್ಷಿಕೋತ್ಸವ ಸಮಾರಂಭವನ್ನು ಚುನಾವಣೆ ಹಿನ್ನೆಲೆಯಲ್ಲಿ ಒಂದು ದಿನಕ್ಕೆ ಸೀಮಿತವಾಗಿದ್ದನ್ನು ಪ್ರಸ್ತಾಪಿಸಿದ ಕುಲಪತಿಗಳು, ವಾರ್ಷಿಕ ಕಾರ್ಯಕ್ರಮವು ವಿದ್ಯಾರ್ಥಿಯಲ್ಲಿ ಅಡಗಿರುವ ಪ್ರತಿಭೆಗಳ ಅನಾವರಣಕ್ಕೆ ಸಹಕಾರಿಯಾಗುತ್ತದೆ. ಈ ಹಿನ್ನೆಲೆಯಲ್ಲಿ ಮುಂದಿನ ವರ್ಷ ಯಾವ ಕಾರಣಕ್ಕೂ ಒಂದು ದಿನ ನಡೆಸದೆ, ಮೂರು ದಿನಗಳೂ ನಡೆಸುವಂತೆಯೂ, ಅಗತ್ಯಬಿದ್ದರೆ ಅನುದಾನ ನೀಡುವುದಾಗಿಯೂ ಪ್ರಾಂಶುಪಾಲರಿಗೆ ಹೇಳಿದರು.

ಯುಬಿಡಿಟಿ ಕಾಲೇಜು ಪ್ರಾಚಾರ್ಯ ಡಾ.ಡಿ.ಪಿ. ನಾಗರಾಜಪ್ಪ ಅಧ್ಯಕ್ಷತೆ ವಹಿಸಿದ್ದರು. ನಾಟಕ, ಸಂಗೀತ ನಿರ್ದೇಶಕ ಪಿಚ್ಚಳ್ಳಿ ಶ್ರೀನಿವಾಸ್, ವಿಟಿಯು ಎಕ್ಸಿಕ್ಯೂಟಿವ್ ಕೌನ್ಸಿಲ್ ಸದಸ್ಯ ರಾಕೇಶ್ ಜಿ., ಸೆನೆಟ್ ಸದಸ್ಯ ಡಾ.ಡಿ. ಅಬ್ದುಲ್ ಬುಡ್ಯೆನ್, ಚಿಕ್ಕೋಡಿ ಕೆವಿಎಲ್‌ಇ ಇಂಜಿನಿಯರಿಂಗ್ ಕಾಲೇಜು ಪ್ರಾಂಶುಪಾಲ ಡಾ. ಪ್ರಸಾದ್ ಬಿ.ರಾಂಪುರೆ, ವಿದ್ಯಾರ್ಥಿ ಸಂಘದ ಪದಾಧಿಕಾರಿಗಳಾದ ಎಂ.ಚೇತನ್, ಸಮೀಕ್ಷ ಎಂ. ವೆರ್ಣೇಕರ್, ಬಾಲಾಜಿ, ಧೀರ್ ರುಡಾಣಿ, ಹನುಮಂತ, ಶ್ರೇಯಾಂಕ್ ಎಂ.ಎನ್., ದಿವ್ಯಶ್ರೀ, ಅಕ್ಷತಾ ಜಿ.ಕೆ., ವೃಷಭ್ ಎಂ.ಬಿ., ಸಿದ್ರಾಮಪ್ಪ ಬಿ., ಸೋಹನ್ ಯು.ಆರ್., ರಕ್ಷಿತಾ ಸಿ. ಉಪಸ್ಥಿತರಿದ್ದರು. ಬಿ.ಎನ್. ವೀರಪ್ಪ ಸ್ವಾಗತಿಸಿದರು. ಶ್ರೀನಿಧಿ ಪ್ರಾರ್ಥಿಸಿದರು.

# ಪೂರ್ಣ ಪ್ರಮಾಣದ ಸಂಪುಟ ರಚನೆ

**(1ನೇ ಪುಟದಿಂದ)** - ಬಿಜಾಪುರ, ಕೆ.ಜೆ.ಜಾರ್ಜ್ - ಬೆಂಗಳೂರು, ಕೃಷ್ಣ ಭೈರೇಗೌಡ - ಬೆಂಗಳೂರು, ರಾಮಲಿಂಗಾರೆಡ್ಡಿ - ಬೆಂಗಳೂರು, ಸತೀಶ್ ಜಾರಕಿಹೊಳಿ - ಬೆಳಗಾವಿ, ಲಕ್ಷ್ಮಿ ಹೆಬ್ಬಾಳ್ಕರ್ - ಬೆಳಗಾವಿ, ಲಕ್ಷ್ಮಣ ಸವದಿ - ಬೆಳಗಾವಿ, ಶರಣ ಪ್ರಕಾಶ ಪಾಟೀಲ್ - ಗುಲ್ಬರ್ಗ, ಪ್ರಿಯಾಂಕ್ ಖರ್ಗೆ - ಗುಲ್ಬರ್ಗ, ಬಸವರಾಜ ರಾಯರೆಡ್ಡಿ - ಕೊಪ್ಪಳ, ಕೆ. ಎಂ.ಶಿವಲಿಂಗೇಗೌಡ - ಹಾಸನ, ಪ್ರಿಯಾಕೃಷ್ಣ - ಬೆಂಗಳೂರು

ಮಧುಬಂಗಾರಪ್ಪ - ಶಿವಮೊಗ್ಗ, ವಿಜಯಾನಂದ ಕಾಶಪ್ಪನವರ್ - ಬಾಗಲಕೋಟೆ, ವಿನಯ ಕುಲಕರ್ಣಿ - ಧಾರವಾಡ, ಹೆಚ್.ಸಿ.ಮಹದೇವಪ್ಪ - ಮೈಸೂರು, ಪುಟ್ಟರಂಗಶೆಟ್ಟಿ - ಚಾಮರಾಜನಗರ, ಪೊನ್ನಣ್ಣ - ಕೊಡಗು, ಶಿವರಾಜ ತಂಗಡಗಿ - ಕೊಪ್ಪಳ, ಚಲುವರಾಯಸ್ವಾಮಿ ಇಲ್ಲವೇ ನರೇಂದ್ರಸ್ವಾಮಿ - ಮಂಡ್ಯ, ಅಜಯ್ ಧರ್ಮಸಿಂಗ್ - ಯಾದಗಿರಿ, ರೂಪಕಲಾ ಶಶಿಧರ್ ಇಲ್ಲವೇ ಕೆ.ಹೆಚ್.ಮುನಿಯಪ್ಪ, ಹೆಚ್.ಕೆ.ಪಾಟೀಲ್,ಆರ್.ವಿ.ದೇಶಪಾಂಡೆ ಹಾಗೂ ಟಿ.ಬಿ.ಜಯಚಂದ್ರ ಅವರ ಪೈಕಿ ಒಬ್ಬರು ವಿಧಾನಸಭೆಯ ಅಧ್ಯಕ್ಷರಾಗುವುದು ಬಹುತೇಕ ಖಚಿತ.

ಜಮೀರ್ ಅಹ್ಮದ್ ಖಾನ್,ಎನ್.ಎ.ಹ್ಯಾರೀಸ್,ಯು.ಟಿ.ಖಾದರ್ ಮತ್ತು ಸಲೀಂ ಅಹ್ಮದ್ ಅವರ ಪೈಕಿ ಮೂರು ಮಂದಿಗೆ ಸಂಪುಟದಲ್ಲಿ ಅವಕಾಶ ದೊರೆಯಲಿದೆ.


**ವಾಸದ ಮನೆ ಭೋಗ್ಯಕ್ಕೆ ಇದೆ**
ದಾವಣಗೆರೆ ಸಿಟಿ ಎಸ್.ಎಸ್ ಬಡಾವಣೆ 'ಎ' ಬ್ಲಾಕ್ ನೇತಾಜಿ ಸುಭಾಷ್‌ಚಂದ್ರ ಬೋಸ್ ಇಂಡೋರ್ ಸ್ಟೇಡಿಯಂ ಹತ್ತಿರ, ಎಸ್. ಸ್ಕ್ವೇಯರ್ ಡ್ಯೂ ಪ್ಲವರ್ ಅಪಾರ್ಟ್‌ಮೆಂಟ್‌ನಲ್ಲಿ ವಾಸ್ತು ಪ್ರಕಾರ ಅಳವಡಿಸಿರುವ ಲಿಫ್ಟ್, ನೀರು, ಹಾಗೂ ಎಲ್ಲಾ ಸೌಕರ್ಯವಿರುವ ವಾಸದ ಮನೆ ಭೋಗ್ಯಕ್ಕಿದೆ. ಬಿ.ಎಸ್. ಸಂತೋಷ್
**96322 67555**

**ಸೈಟ್‌ಗಳು ಮಾರಾಟಕ್ಕಿದೆ**
ಶಿವ-ಪಾರ್ವತಿ ಬಡಾವಣೆ ಪಶ್ಚಿಮ 30x47 (ಜೈನ್ ಕಾಲೇಜ್ ಪಕ್ಕ) ಪಶ್ಚಿಮ 30x55 (40 ಅಡಿ ಸಿಮೆಂಟ್ ರಸ್ತೆ), ಪೂರ್ವ 30x35, 30x46, ಬನಶಂಕರಿ ಬಡಾವಣೆ, ಪಶ್ಚಿಮ 40x78 (ಅಕ್ಕ-ಪಕ್ಕ) (40 ಅಡಿ ರಸ್ತೆ)
ಐಗೂರು ವಿಜಯಕುಮಾರ್
**99457 02495**

**ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ**
(ಮಹಿಳೆಯರಿಗೆ ಆದ್ಯತೆ)
ಅಕೌಂಟ್ & ಟ್ಯಾಲಿಯಲ್ಲಿ ಅನುಭವವುಳ್ಳವರು ಬೇಕಾಗಿದ್ದಾರೆ.
ಭಾರತ್ ಎಂಟರ್‌ಪ್ರೈಸಸ್, ಚಪ್ಪಲಿ ಸಗಟು ಮಾರಾಟಗಾರರು, ಚೌಕಿಪೇಟೆ, ದಾವಣಗೆರೆ.
**90088 39522**

**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆಯಲ್ಲಿ 40x60 ಪಶ್ಚಿಮ, 35x60 ಉತ್ತರ, ಪೂರ್ವ ಕಾರ್ನರ್ 30x46 ಪೂರ್ವ, ಹೊಸ ಬನಶಂಕರಿ ಬಡಾವಣೆಯಲ್ಲಿ 30x50 ಉತ್ತರ ಅಕ್ಕ-ಪಕ್ಕ 20x30 ದಕ್ಷಿಣ, 30x40 ಪಶ್ಚಿಮ, ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 30x50 ಪೂರ್ವ.
ಸ್ವಾಮಿ ಏಜೆಂಟ್ , ವಿದ್ಯಾನಗರ
**97421 44715**

**ಕಾರ್ನರ್ ಸೈಟ್ ಮಾರಾಟಕ್ಕಿವೆ**
ಹಳೇ ಬನಶಂಕರಿ ಬಡಾವಣೆ ಪೂರ್ವ-ಉತ್ತರ 40x82, (60 ಅಡಿ ರಸ್ತೆ), ಶಿವ-ಪಾರ್ವತಿ ಬಡಾವಣೆ ಪೂರ್ವ 40x60 (40 ಅಡಿ ಸಿಮೆಂಟ್ ರಸ್ತೆ ಪಕ್ಕ 110 ಅಡಿ ರಸ್ತೆ) ಜೆ. ಹೆಚ್. ಪಟೇಲ್ ಬಡಾವಣೆ ಪಶ್ಚಿಮ-ದಕ್ಷಿಣ ಕಾರ್ನರ್ 50x40, ದಕ್ಷಿಣ 30x40.
ಐಗೂರು ವಿಜಯಕುಮಾರ್
**99457 02495**

**ಬೇಕಾಗಿದ್ದಾರೆ**
ಅಂಗಡಿಯಲ್ಲಿ ಕೆಲಸ ಮಾಡಲು 18-30 ವಯಸ್ಸಿನ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
ಪ್ರಕಾಶ್ ಟಿವಿ ಸೆಂಟರ್
ಮುರುಘರಾಜೇಂದ್ರ ಕಾಂಪ್ಲೆಕ್ಸ್, ಕುರುಬರ ಹಾಸ್ಟೆಲ್ ಎದುರು, ಹದಡಿ ರೋಡ್, ದಾವಣಗೆರೆ.

**EC / ಇಸಿ, E-swathu, Khatha Change Building Licence & Other Property Documents**
**96118-66449**

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
**99863 61250**
**91132 85992**

**ಮನೆಗಳು ಬಾಡಿಗೆಗಿವೆ**
2BHK ಮನೆಗಳು ಬಾಡಿಗೆಗಿವೆ. 2ನೇ ಮಹಡಿ, 1ನೇ ಕ್ರಾಸ್, 1ನೇ ಮೇನ್, ಶಂಕರ್ ವಿಹಾರ್ ಲೇಔಟ್, ದಾವಣಗೆರೆ.
**76763 62614**

**ಬೇಕಾಗಿದ್ದಾರೆ**
ಬಾರ್ & ರೆಸ್ಟೋರೆಂಟ್‌ನಲ್ಲಿ ಕೆಲಸ ಮಾಡಲು ಟ್ಯಾಲಿ ಅಕೌಂಟೆಂಟ್, ಬಿಲ್ಲಿಂಗ್ ಆಪರೇಟರ್, captain, steward & Marketing Manager.
ತಕ್ಷಣ ಬೇಕಾಗಿದ್ದಾರೆ. ಆಕರ್ಷಕ ಸಂಬಳ ಕೊಡಲಾಗುವುದು. ಸಂಪರ್ಕಿಸಿ.
**90087 31531, 96060 96697**

**ಮನೆ ಬಾಡಿಗೆಗೆ**
ಸರಸ್ವತಿ ಬಡಾವಣೆ 'ಬಿ' ಬ್ಲಾಕ್, 1ನೇ ಮೇನ್, 4ನೇ ಕ್ರಾಸ್, ಕೆ.ಎಸ್.ಎಸ್. ಕಾಲೇಜ್ ಎದುರು ರಸ್ತೆ, ಶ್ರೀಕರ #829/15, ಉತ್ತರ ದಿಕ್ಕು, 2 ಬೆಡ್ ರೂಂ, ಬೋರ್ / ಮುನ್ಸಿಪಲ್ ನೀರು, ಕಾರ್ ಪಾರ್ಕಿಂಗ್, 1ನೇ ಮಹಡಿಯಲ್ಲಿ ಮನೆ ಬಾಡಿಗೆಗೆ ಇದೆ.
**96203 99426**

**WANTED TEACHERS**
B.Sc, B.Ed (PCM) - 2
BA, B.Ed (Social Science) - 2
M.Sc (mathematics)-1, BE-1
**ACM School**
Devarj Urs Layout, 'C' Block, 2nd Cross, Davanagere.
**89703 21855, 82965 02675**

**ಸೈಟುಗಳು ದೊರೆಯುತ್ತವೆ**
ಡಾಲರ್ಸ್ ಕಾಲೋನಿ ಬನಶಂಕರಿ ಬಡಾವಣೆ, ಶಕ್ತಿನಗರ, ಡಿಸಿಎಂ, ಜಯನಗರ ಹಾಗೂ ಇತರೆ ಬಡಾವಣೆಗಳಲ್ಲಿ 30x40, 30x50 ಸೈಟುಗಳು & ಕಮರ್ಷಿಯಲ್ ಸೈಟುಗಳು, ಜಮೀನುಗಳು ಉತ್ತಮ ದರದಲ್ಲಿ ದೊರೆಯುತ್ತವೆ.
**97315 12365**

**ಬೇಕಾಗಿದ್ದಾರೆ**
PUC / DEGREE ಆದ ಮಹಿಳೆಯರು ರ್‍ಯಾಕ್ ನಿಂದ ಸ್ಟಾಕ್ ತೆಗೆಯಲು ಹಾಗೂ ಡೆಲಿವರಿ ಬಾಯ್ಸ್ ಸಗಟು ಔಷಧಿ ಅಂಗಡಿಗೆ ಬೇಕಾಗಿದ್ದಾರೆ.
ಭೇಟಿ ಮಾಡುವ ಸಮಯ ಸಂಜೆ: 6.30 ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿ.ಜೆ ಬಡಾವಣೆ, ದಾವಣಗೆರೆ.

**ಬೇಕಾಗಿದ್ದಾರೆ**
ಸನ್ನಿಧಿ ಟ್ರೇಡಿಂಗ್ ಕೋ ದಾವಣಗೆರೆ ವಿಭಾಗಕ್ಕೆ ಬೇಕಾಗಿದ್ದಾರೆ.
ಡೆಲಿವರಿ ಬಾಯ್ಸ್, ಅಕೌಂಟ್ ಎಕ್ಸಿಕ್ಯೂಟಿವ್
**89045 80039/30/37**
**08192 464315, 73493 91292**

**ಹೋಟೆಲ್ ಬಾಡಿಗೆ ಅಥವಾ ಲೀಸ್‌ಗೆ ಕೊಡುವುದಿದೆ**
ಎವಿಕೆ ಕಾಲೇಜು ರೋಡ್, ಸಿಟಿ ಸೆಂಟ್ರಲ್ ಹಾಸ್ಪಿಟಲ್‌ನ ಪಕ್ಕ.
**99801 02403, 83107 52803**

**ಮನೆ ಬಾಡಿಗೆಗೆ ಇದೆ**
ವಿದ್ಯಾನಗರ 2ನೇ ಬಸ್ ಸ್ಟಾಪ್ ಹತ್ತಿರ, 3 ಬೆಡ್ ರೂಮ್ ಉತ್ತರ ದಿಕ್ಕಿನ ಸುಸಜ್ಜಿತ ಮೊದಲನೇ ಮಹಡಿಯ ಮನೆ ಬಾಡಿಗೆಗೆ ಇದೆ, ಬೋರ್ ವೆಲ್ & ಕಾರ್ಪೋರೇಷನ್ ನೀರಿನ ಸೌಲಭ್ಯವಿರುತ್ತದೆ. ಆಸಕ್ತರು ಸಂಪರ್ಕಿಸಿ :
**97391 19921, 99026 88442**

**WANTED**
Required Male Office Assistant
**ANDANUR CHITS (R)**
Ram & Co. Circle, Davanagere.

**ಬೇಕಾಗಿದ್ದಾರೆ**
ಪಾರ್ಟ್ ಟೈಮ್ ಕೆಲಸ ನಿಮ್ಮ ಮನೆಯಿಂದಲೆ ಕೆಲಸ ಮಾಡಿ, ತಿಂಗಳಿಗೆ 10000 /- ದಿಂದ 15000/- ಸಂಪಾದಿಸಿ.
ಸಂಪರ್ಕಿಸಿ :
**89714 63581, 81055 03664**

**PART TIME JOBS**
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ
(ಕೋರಿಯರ್ ಸೌಲಭ್ಯವಿದೆ)
**91487 33213**

**ಕೆಲಸಕ್ಕೆ ತಕ್ಷಣ ಬೇಕಾಗಿದ್ದಾರೆ**
ವರ್ಕ್ ಫ್ರಮ್ ಹೋಮ್ (ಟೆಲಿಕಾಲಿಂಗ್) (ಪಾರ್ಟ್ ಟೈಂ) (ಫುಲ್ ಟೈಂ) ಆಫೀಸ್ ವರ್ಕ್ (ಟೆಲಿಕಾಲಿಂಗ್) (ಪಾರ್ಟ್ ಟೈಂ) (ಫುಲ್ ಟೈಂ) ಯಾವುದೇ ಶುಲ್ಕ ಇರುವುದಿಲ್ಲ. ಸಂಬಳ : 19000, 32000.
ವಿದ್ಯಾರ್ಹತೆ : 8, 9, 10ನೇ ತರಗತಿಯಿಂದ ಪಿಯುಸಿ & ಡಿಗ್ರಿಯವರೆಗೆ.
**93805 86274**

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
**91642 22937**

**2 BHK ಮನೆ ಬಾಡಿಗೆಗೆ ಇದೆ**
ಮೊದಲನೆ ಮಹಡಿಯಲ್ಲಿ 2 BHK ಮನೆ ಬಾಡಿಗೆಗೆ ಇದೆ
ಸ್ಥಳ: 2ನೇ ಮುಖ್ಯ ರಸ್ತೆ, ಕೆಬಿ ಬಡಾವಣೆ ಜೈನ್ ಮಂದಿರದ ಹತ್ತಿರ, ದಾವಣಗೆರೆ.
**70198 96845**

**ಬೇಕಾಗಿದ್ದಾರೆ**
ತಕ್ಷಣ ಬೇಕಾಗಿದ್ದಾರೆ. ತಮ್ಮ ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ :
1) ಸೇಲ್ಸ್ ಮೆನ್
2) ಸೇಲ್ಸ್ ಗರ್ಲ್ಸ್, ಕ್ಲೀನರ್
**63631 97523**

**WANTED**
Sales Executives -04
Min.Qualification : Any Degree
Experience in Medical field.
contact : Vishwas Scientific Co.
Hadadi Road, Davanagere
**99860 06349**

**ಬೇಕಾಗಿದ್ದಾರೆ**
ಮಾರ್ಕೆಟಿಂಗ್ ಮಾಡಲು ಮತ್ತು ಡೆಲಿವರಿ ಕೊಡಲು Lady Executives ಬೇಕಾಗಿದ್ದಾರೆ, ಓದಲು ಬರೆಯಲು ಬರಬೇಕು, Driving Liecence ಹೊಂದಿರುವವರಿಗೆ ಆದ್ಯತೆ. ಸಂಪರ್ಕಿಸಿ :
ದಿ ರಾವ್ ಸ್. ಕಿಚನ್ ಚಿಗಟೇರಿ ಲೇಔಟ್, ದಾವಣಗೆರೆ.
**95353 97599**

**ಬೇಕಾಗಿದ್ದಾರೆ**
ಕೆಲಸ ಮಾಡಲು ಅನುಭವವುಳ್ಳ ಯುವತಿಯರು ಜಾಕಿ ಶೋರೂಮ್‌ಗೆ ಬೇಕಾಗಿದ್ದಾರೆ, ದರ್ಶನ್ ಆರ್ಕೇಡ್ ಡೆಂಟಲ್ ಕಾಲೇಜ್ ರೋಡ್, ದಾವಣಗೆರೆ.
**08192 224842**
ಬರುವಾಗ ದಯವಿಟ್ಟು ಫೋಟೋ ಮತ್ತು ಬಯೋಡೇಟಾ ತನ್ನಿ.

**ಸೈಟು ಮಾರಾಟಕ್ಕಿದೆ**
ಬಾತಿ ಹತ್ತಿರ ಅನ್ನಪೂರ್ಣ ಎನ್‌ಕ್ಲೇವ್ (30x40) ಉತ್ತರ-ದಕ್ಷಿಣ (ರೂ. 1599) ಮಲ್ಲಶೆಟ್ಟಿಹಳ್ಳಿ NH-4ಗೆ ಹೊಂದಿಕೊಂಡಿರುವ (30x40) ಪೂರ್ವ-ಉತ್ತರ (ರೂ.1299)
**70196 18397**

**2 BHK ಮನೆ ಬಾಡಿಗೆಗೆ / ಮಾರಾಟಕ್ಕೆ**
ರಂಗನಾಥ ಬಡಾವಣೆ ಕಲ್ಲೇಶ್ವರ ಅಪಾರ್ಟ್‌ಮೆಂಟ್‌ನಲ್ಲಿ ಪ್ಲಾಟ್ ನಂ. 202, 2ನೇ ಮಹಡಿಯಲ್ಲಿ, 2 BHK ಮನೆ ಬಾಡಿಗೆಗೆ/ಮಾರಾಟಕ್ಕೆ ಇದೆ. ಸಂಪರ್ಕಿಸಿ :
**94482 29632**

**20 ಲೀಟರ್ ವಾಟರ್ ಕ್ಯಾನ್ ಸಪ್ಲೈ ಮಾಡಲು ಡ್ರೈವಿಂಗ್ with ಡೆಲಿವರಿ ಮಾಡಲು ಹುಡುಗರು ಬೇಕಾಗಿದ್ದಾರೆ.**
**97318 91077**

**ಬೇಕಾಗಿದ್ದಾರೆ**
ಎಂಇಎಸ್ ಶಿಕ್ಷಣ ಸಂಸ್ಥೆ
ಆಂಜನೇಯ ಬಡಾವಣೆ ದಾವಣಗೆರೆ ಅನುಭವಿ ಶಿಕ್ಷಕರು ನರ್ಸರಿ ಪ್ರೈಮರಿ ಎಲ್ಲಾ ವಿಷಯಕ್ಕೂ ಶಿಕ್ಷಕರು, ದೈಹಿಕ ಶಿಕ್ಷಕರು ಹಾಗೂ ಬಾಯ್ಸ್ ಹಾಸ್ಟೆಲ್ ವಾರ್ಡನ್, ಡಿ ಗ್ರೂಪ್ ನೌಕರರು, ವಾಹನ ಚಾಲಕರು ಹಾಗೂ ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ.
**9880436414 98800 30171**

**ತಕ್ಷಣ ಬೇಕಾಗಿದ್ದಾರೆ**
5th, 7th, 9th,10th, PUC, Degree ITI, Diploma ಯುವಕ-ಯುವತಿಯರು MNC ಕಂಪನಿಗಳಿಗೆ, ಆಫೀಸ್‌ಗಳಿಗೆ, ಶೋ ರೂಂಗಳಿಗೆ, ಬಿಗ್ ಬಜಾರ್‌ಗಳಿಗೆ ನೇರ ನೇಮಕಾತಿ ಸಂಬಳ 17,100/-, 56,000/- ವಸತಿ, ಊಟವಿದೆ.
**96862 20858**

**ಸೈಟು & ಮನೆಗಳು ಮಾರಾಟಕ್ಕಿವೆ**
50x60 ದಕ್ಷಿಣ ವಿನಾಯಕ ಬಡಾವಣೆ
50x33 ಪೂರ್ವ ಸಿದ್ದವೀರಪ್ಪ ಬಡಾವಣೆ
30x60 ಪೂರ್ವ ಬಸವೇಶ್ವರ ಬಡಾವಣೆ
20x60 ಉತ್ತರ ಎಂಸಿಸಿ ಬಿ ಬ್ಲಾಕ್
ಏಜೆಂಟ್ : ಎಸ್. ಯಲ್ಲೋಜಿರಾವ್
**97418 11694**

**ಬಾಡಿಗೆ ಮನೆಗಾಗಿ ಸಂಪರ್ಕಿಸಿ :**
**99006 17813**
**70198 99814**

**ಮನೆ ಬಾಡಿಗೆಗೆ ಇದೆ**
2 BHK Shivakumar swamy Badavane, 2nd stage, Near Royal Enfield Show-room, Hadadi road,
Mob : **99027 95877**

**ಬೇಕಾಗಿದ್ದಾರೆ**
Tally ಆಗಿರುವ ಮಹಿಳೆಯರು ಬೇಕಾಗಿದ್ದಾರೆ. ( ಅನುಭವವಿರುವವರಿಗೆ ಆದ್ಯತೆ ) ಕಿಸಾನ್ ವರ್ಲ್ಡ್, ಹದಡಿ ರೋಡ್, ದಾವಣಗೆರೆ. ಸಂಪರ್ಕಿಸಿ :
**99642 12379**

**ಬೇಕಾಗಿದ್ದಾರೆ**
B.A., B.Ed., ಮತ್ತು B.Sc., B.Ed., (PCM/ CBZ) ಶಿಕ್ಷಕರು ಹಾಗೂ ಆಯಾ ಮತ್ತು Parttime Driver ಬೇಕಾಗಿದ್ದಾರೆ.
ನಂದಗೋಕುಲ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆ,
ದೇವರಾಜ ಅರಸು ಬಡಾವಣೆ ಸಿ ಬ್ಲಾಕ್, 6ನೇ ಕ್ರಾಸ್‌ನಲ್ಲಿರುವ (ಹೊಸ RTO ಕಛೇರಿ ಹಿಂಭಾಗ, ಕೊಂಡಜ್ಜಿ ರಸ್ತೆ)
ಕಾರ್ಯದರ್ಶಿ **99640 17729**

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. **9538777582**
ಕೆಲಸ 100% ಗ್ಯಾರಂಟಿ.

**ಸೈಟು ಮಾರಾಟಕ್ಕಿದೆ**
ಗ್ಲಾಸ್ ಹೌಸ್ ಹತ್ತಿರ 30x50 ಉತ್ತರ-ದಕ್ಷಿಣ ಕಾರ್ನರ್ (ರೂ. 3499) ಹೊಸ ಸರ್‌ಎಂವಿ ಕಾಲೇಜ್ ಹತ್ತಿರ, (30x40) ಉತ್ತರ (ರೂ. 2499)
**70196 18397**

**ತರಳಬಾಳು ಆಂಗ್ಲ ಮಾಧ್ಯಮ ಶಾಲೆ,**
ಎಲೇಬೇತೂರು
**ಶಿಕ್ಷಕ/ಕಿಯರು ಬೇಕಾಗಿದ್ದಾರೆ**
ವಿಜ್ಞಾನ ಶಿಕ್ಷಕ/ಕಿ- B.Sc.,/M.Sc., B.Ed.,
ಗಣಿತ ಶಿಕ್ಷಕ/ಕಿ- B.Sc.,/M.Sc., B.Ed.,
ದೈಹಿಕ ಶಿಕ್ಷಣ - B.A., B.PEd.,
ನರ್ಸರಿ & ಪ್ರಾಥಮಿಕ ವಿಭಾಗ - B.A., B.Sc., B.Ed.,
**91648 67594, 99455 37697**

**ತುರ್ತಾಗಿ ಕೆಲಸಕ್ಕೆ ಬೇಕಾಗಿದ್ದಾರೆ**
ಇಂಡಸ್ಟ್ರೀಸ್‌ನಲ್ಲಿ ಕೆಲಸ ಮಾಡಲು ಹುಡುಗರು/ಹುಡುಗಿಯರು ಬೇಕಾಗಿದ್ದಾರೆ.
ಸಂಜನ ವುಡ್ ಇಂಡಸ್ಟ್ರೀಸ್
2ನೇ ಕ್ರಾಸ್, ಕರೂರ್ ಇಂಡಸ್ಟ್ರೀಯಲ್ ಏರಿಯಾ, ಪಂಚ ಲಿಂಗೇಶ್ವರ ದೇವಸ್ಥಾನದ ಹಿಂಭಾಗ, ದಾವಣಗೆರೆ-2. ಸಂಪರ್ಕಿಸಿ :
**83107 48229, 83100 15757**

**ಮನೆ ಬಾಡಿಗೆಗಿದೆ**
ಗಣೇಶ ಪೇಟೆ, 2ನೇ ಕ್ರಾಸ್, ಶಿವಾಜಿ ನಗರ, #791/1, 1ನೇ ಮಹಡಿಯಲ್ಲಿ 15x30 ಅಳತೆಯ, ಬೋರ್, ಮುನ್ಸಿಪಲ್ ನೀರಿನ ವ್ಯವಸ್ಥೆ ಇರುವ ಪೂರ್ವ ದಿಕ್ಕಿನ ಮನೆ ಬಾಡಿಗೆಗೆ ಇದೆ.
**98445 46463, 89707 03696**

**WANTED**
Receptionist For **Chiranjeevi academy,** Davangere. Any Degree. Attractive income. should talk in kanada, Telugu and English. Contact.
**94900 00406**

**ಮನೆ ಬಾಡಿಗೆಗಿದೆ**
ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್ 9ನೇ ಕ್ರಾಸ್‌ನಲ್ಲಿ ಡೋರ್ ನಂ. 144 ನಂಬರಿನ ಮನೆಯ ಒಂದನೇ ಮಹಡಿಯಲ್ಲಿ ನೀರಿನ ಸೌಕರ್ಯ ಇರುವ 3 ಬೆಡ್ ರೂಂ ಮನೆ ಬಾಡಿಗೆಗಿದೆ. ಸಂಪರ್ಕಿಸಿ
**94480-47506**

**Wanted Lady Teachers**
B.Sc, B.Ed (PCM) Method
BA, B.Ed, English /History.
Minimum 2 to 5 Years Experience in teaching. **Contact : Secretary, Jnanadeepa public School**
(English Medium) 60 feet ring road Nittivalli davanagere-577004.
**94496 79346, 89710 18943**

**ಬೇಕಾಗಿದ್ದಾರೆ**
ರಾಣೇಬೆನ್ನೂರಿನ ಪ್ರತಿಷ್ಠಿತ ಹೋಟೆಲ್‌ನಲ್ಲಿ ಕೆಲಸ ಮಾಡಲು ಅನುಭವಿ ಮಾಂಸಾಹಾರಿ ಅಡುಗೆಯವರು ವಿಶೇಷವಾಗಿ ಬಿರಿಯಾನಿ ಸ್ಪೆಷಲಿಸ್ಟ್ ಬೇಕಾಗಿದ್ದಾರೆ.
ವಸತಿ ಮತ್ತು ಭೋಜನ ಉಚಿತ.
ಆಸಕ್ತರು ಸಂಪರ್ಕಿಸಿ :
**84315 37567**

**ಬೇಕಾಗಿದ್ದಾರೆ**
ಎಂಸಿಸಿ 'ಎ' ಬ್ಲಾಕ್, ಚರ್ಚ್ ರೋಡ್‌ನಲ್ಲಿರುವ ಸೂಪರ್ ಮಾರ್ಕೆಟ್‌ಗೆ INCHARGER ಬೇಕಾಗಿದ್ದಾರೆ.
ಸೂಚನೆ : ಕನಿಷ್ಠ ಎರಡು ವರ್ಷ ಸೂಪರ್ ಮಾರ್ಕೆಟಿನಲ್ಲಿ INCHARGE ಆಗಿ ಕೆಲಸ ಮಾಡಿರುವ ಅನುಭವವಿರಬೇಕು.
ಸಂಪರ್ಕಿಸಿ. **9972911344**

**ಸೈಟ್ ಮಾರಾಟಕ್ಕಿದೆ**
ದಾವಣಗೆರೆ ನಗರದ ಹೊರವಲಯದ ಕುಂದುವಾಡ ಹತ್ತಿರ ಇರುವ ತುಂಗಭದ್ರಾ ಬಡಾವಣೆಯಲ್ಲಿ 20x30 ಅಳತೆಯ, ಉತ್ತರ ಮುಖವುಳ್ಳ ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ :
**97416 84666, 82177 98233**

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
**ದಾವಣಗೆರೆ : 2 & 3ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.**
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
**M:9740523710**

**ಸೈಟು ಮಾರಾಟಕ್ಕಿದೆ**
ಮಹಾಲಕ್ಷ್ಮಿ ಬಡಾವಣೆಯಲ್ಲಿ 40 ಅಡಿ ರೋಡ್‌ಗೆ ದಕ್ಷಿಣ ದಿಕ್ಕಿನ 41x92 ಅಳತೆಯ ಸೈಟು ಮಾರಾಟಕ್ಕೆ ಇದೆ.
ಮೊ : **98448 82366**

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಹೌಸ್ ಕೀಪಿಂಗ್ ಹುಡುಗರು ಬೇಕಾಗಿದ್ದಾರೆ.
ಸಂಬಳ 12.000, ಊಟ, ರೂಂ ಉಚಿತ, ವಯಸ್ಸು 18 ರಿಂದ 30 ವರ್ಷ 12 ಗಂಟೆ ಕೆಲಸ. ಸಂಪರ್ಕಿಸಿ.
**9740098047, 9740098064**

**2 BHK HOUSE FOR RENT**
Salaried People in Taralabalu Badavane, Davangere.
**94489 24389**

**Teachers Wanted Immediately**
B.Sc B.Ed. (CBZ): science Teacher : 02 post.
BA, B.Ed (Kannada major) : Kannada Teacher : 02 post.
BA, B.Ed (English Major): 02 post.
SJM English Medium School
Virakthamat Doddapet Davangere
**Contact: 99649 70221**

**ಬೇಕಾಗಿದ್ದಾರೆ**
ಪೇಂಟ್ ಅಂಗಡಿಯಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
**80504 03090**

**ಬೇಕಾಗಿದ್ದಾರೆ**
ಪಾಂಡವ ಕನ್ನಡ ದಿನ ಪತ್ರಿಕೆ ಯಲ್ಲಿ ಸಂಜೆ 4 ರಿಂದ ರಾತ್ರಿ 9 ಗಂಟೆಯವರೆಗೆ ಡೆಸ್ಕ್‌ನಲ್ಲಿ ಕೆಲಸ ಮಾಡಲು ಅನುಭವಿ ವರದಿಗಾರರು ಬೇಕಾಗಿದ್ದಾರೆ
( Work from Home )
**97427 89207**

**ಶಾಲೆಗೆ ಆಯಾ ಬೇಕಾಗಿದ್ದಾರೆ**
ಜಯದೇವ ವೃತ್ತದ ಬಳಿಯ ಶಾಲೆಗೆ ಆಯಾ ಬೇಕಾಗಿದ್ದಾರೆ.
salary : 5500 to 6000
ಸಮಯ : 9 to 5 PM
**63616 62669, 99801 48289**

**ನೇರ ಪರೀಕ್ಷೆಗಳು**
SSLC, PUC, BA, B.Com, NTC, BBA, MBA (ALL) B.Tech, Diploma, ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್
ಶ್ರೀ ಗಂಗೋತ್ರಿ ಕರೆಸ್ಪಾಂಡೆನ್ಸ್ ಕಾಲೇಜ್
ಲಾಯರ್ ರೋಡ್, ದಾವಣಗೆರೆ.
ಫೋ. : **86602 35013**

**ವಾಹನಗಳು ಬಾಡಿಗೆಗೆ ಬೇಕಾಗಿವೆ**
ಸನ್ನಿಧಿ ಟ್ರೇಡಿಂಗ್ ಕೋ ದಾವಣಗೆರೆ ವಿಭಾಗಕ್ಕೆ ಕಮರ್ಷಿಯಲ್ ವಾಹನಗಳನ್ನು ಅಟ್ಯಾಚ್ ಮಾಡಿಕೊಳ್ಳುತ್ತಿದ್ದೇವೆ. ಬಜಾಜ್ ಮ್ಯಾಕ್ಸಿಮ x ವೈಡ್ ಮಹೀಂದ್ರ ಆಲ್ಫ್, ಮಹೀಂದ್ರ ತೆರೊ ವಿಯಗೋ ಏಪ್
**89045 80039/30/37**
**73493 91292**

**WANTED FOR RECEPTIONIST**
Age 21 - 27
**HAIRPOINT UNISEX SALON**
2nd Floor, No 2988-2A,2B. 7th Main, 3rd Cross Rd, MCC 'B' Block, Davanagere-4. Karnataka
**97386 64400, 91483 19342**

**ಸೈಟುಗಳು ಮಾರಾಟಕ್ಕಿವೆ**
ಎಸ್.ಎಸ್. ಹೈಟೆಕ್ ಬಳಿ 30x50 ಅಳತೆಯ ಸೈಟುಗಳು ಮಾರಾಟಕ್ಕಿವೆ.
**72045 77823**

**HOUSE FOR RENT ONLY**
# 916, Nijalingappa Badavane, 1st main, 4th Cross, Davangere. near Amrutha Vidyalaya, School Nijalingappa Badavane, DVG.,
**82964 69527**

**ಬೇಕಾಗಿದ್ದಾರೆ**
ಸನ್ನಿಧಿ ಟ್ರೇಡಿಂಗ್ ಕೋ ದಾವಣಗೆರೆ ವಿಭಾಗಕ್ಕೆ ಬೇಕಾಗಿದ್ದಾರೆ.
ನುರಿತ ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ಸ್
ಮಾಸಿಕ ವೇತನ : 10,000 -25,000 ರೂ.
**89045 80039/30/37**
**08192 464315, 73493 91292**

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕಿವೆ. ಸ್ಥಳ : ದೊಡ್ಡಬಾತಿ
**88920 08800**

## ಹಿಂದ.. ಮುಂದ..ಅಹಿಂದ!!!

ಏನು ಅಂಕಲ್ ಬಹಳ ದಿನದ ನಂತರ ಕಾಣ್ತಾ ಇದೀರಿ!

**ತಮ್ಮಾ ಕಾವು ಕಡಿಮೆ ಆಗ್ತಾ ಐತಿ ಅದಕ್ಕೇ ಹೊರಗಡೆ ಬರ್ತಾ ಇದೀನಿ.**

ಕಾವು ಐ ಮೀನ್ ಹೀಟ್! ಯಾವ ಕಾವು ಅಂಕಲ್?!



**ಚುನಾವಣೆ ಕಾವು!**

ಅಂದ ಹಾಗೆ ಈ ಬಾರಿಯ ಎಲೆಕ್ಷನ್ ರಿಸಲ್ಟ್ ಬಗ್ಗೆ ಏನಂತೀರಿ?

**ಅರಳಿದ್ದ ಕಮಲ ಮುದುಡಿತು! ಕೈಗೆ ಜನ ಜೈ ಹೇಳ್ಯಾರೆ ನೋಡಪಾ.**

ಹೌದು ಅಂಕಲ್. ಕಳೆದ ವರ್ಷ ಸಿದ್ಧರಾಮಯ್ಯನವರ ಬರ್ತಡೇ ದಾವಣಗೆರೆಯಲ್ಲಿ ನಡೆದಾಗ ನೀವು ಈ ಮುನ್ಸೂಚನೆ ನೀಡಿದ್ರಿ.

**ಹೌದು, ಆಗ ದಾವಣಗೆರೆ See.. ದ್ರಾಮಣಗೆರೆ ಆಗಿತ್ತು, ಈಗ ಕರ್ನಾಟಕ See..ದ್ರಾಮರ್ನಾಟಕ!**

ಹೆಂಗೆ!?

**ನೋಡಪಾ ಅನ್ನ ಅಪರೂಪವಾದ ದಿನಗಳನ್ನು ಕಳೆದಿದ್ದ ಈ ವ್ಯಕ್ತಿ ಅನ್ನಕ್ಕಾಗಿ ಬಡವರು ಪರದಾಡಬಾರದು ಅಂತಾ ಅನ್ನಭಾಗ್ಯ ಕೊಟ್ಟ. ಜೊತೆಗೆ ಹಲವು ಭಾಗ್ಯಗಳ ಕೊಡುಗೆ ನೀಡಿದ್ರು. ಜೀವನದಲ್ಲಿ ಹುಟ್ಟು ಹಬ್ಬಾನೇ ಆಚರಿಸಿಕೊಳ್ಳದ ಈ ಮನುಷ್ಯನಿಗೆ ನಾವೂ ಒಂದು ಭಾಗ್ಯ ಕೊಡೋಣ ಅಂತಾ ಕಳೆದ ವರ್ಷ ದಾವಣಗೆರೇಲಿ ಲಕ್ಷಾಂತರ ಜನ ಸೇರ್ಕೊಂಡು ಬರ್ತಡೇ ಭಾಗ್ಯ ಕೊಟ್ಟಿದ್ರು. ಈಗ ಮತ್ತೊಮ್ಮೆ ಈ ಭಾಗ್ಯ.**




ಯಾವ ಭಾಗ್ಯ?

**ಸಿ.ಎಂ. ಭಾಗ್ಯ !!!**

# ಹವಾಮಾನ ವೈಪರೀತ್ಯ ಪರಿಹಾರಕ್ಕೆ ಯತ್ನಿಸಿ

## ವಿದ್ಯಾರ್ಥಿಗಳಿಗೆ ಜಿಎಸ್‌ಡಬ್ಲ್ಯೂ ಲಿಮಿಟೆಡ್‌ನ ಉಪಾಧ್ಯಕ್ಷ ಆರ್.ಟಿ. ಶ್ರೀನಿವಾಸ್ ಕರೆ

ದಾವಣಗೆರೆ, ಮೇ 19- ಪ್ರಸ್ತುತ ದಿನಗಳಲ್ಲಿ ಮನುಕುಲದ ಬಹುದೊಡ್ಡ ಪಿಡುಗಾಗುತ್ತಿರುವ ಹವಾಮಾನ ವೈಪರಿತ್ಯಕ್ಕೆ ಸೂಕ್ತ ಪರಿಹಾರ ಕಂಡುಕೊಳ್ಳಲು ವಿದ್ಯಾರ್ಥಿಗಳು ಮುಂದಾಗಬೇಕು ಎಂದು ಜಿಎಸ್‌ಡಬ್ಲ್ಯೂ ಲಿಮಿಟೆಡ್‌ನ ಉಪಾಧ್ಯಕ್ಷ ಆರ್. ಟಿ. ಶ್ರೀನಿವಾಸ್ ಕರೆ ನೀಡಿದರು.

ನಗರದ ಯು.ಬಿ.ಡಿ.ಟಿ. ಇಂಜಿನಿಯರಿಂಗ್ ಕಾಲೇಜಿನಲ್ಲಿ ಇಂದು ಹಮ್ಮಿಕೊಳ್ಳಲಾಗಿದ್ದ 'ಚೈತ್ರ-2023' ಉದ್ಘಾಟನಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಹವಾಮಾನ ವೈಪರೀತ್ಯದ ಪರಿಣಾಮ ಬಿಸಿಲು ಹೆಚ್ಚಾಗುತ್ತಿದೆ. ಕಾಲಗಳಿಗೆ ತಕ್ಕಂತೆ ಹವಾಮಾನ ಬದಲಾಗುತ್ತಿಲ್ಲ. ಅತಿವೃಷ್ಟಿ, ಅನಾವೃಷ್ಟಿಗಳು ಹೆಚ್ಚಾಗುತ್ತಿವೆ. ಈ ಬಗ್ಗೆ ವಿಜ್ಞಾನಿಗಳಿಂದ ಸಾಕಷ್ಟು ಚರ್ಚೆ ನಡೆಯುತ್ತಿದೆಯಾದರೂ, ಪರಿಹಾರ ಕಂಡುಕೊಳ್ಳಲು ವಿಫಲರಾಗುತ್ತಿದ್ದೇವೆ ಎಂದು ಹೇಳಿದರು.

ಇಂದಿನ ಯುವ ಪೀಳಿಗೆ ಸಮಾಜಕ್ಕೆ ಏನಾದರೂ ಕೊಡುಗೆ ಕೊಡಬೇಕೆಂದರೆ ಪರಿಸರವನ್ನು ಹಸಿರಾಗಿಟ್ಟು ಕೊಳ್ಳಬೇಕು. ಗಿಡ ಮರಗಳನ್ನು ಬೆಳೆಸಬೇಕು. ಇಲ್ಲದಿದ್ದರೆ ಮುಂದಿನ ಜನಾಂಗ ಪರಿಸರ ವಿಕೋಪಕ್ಕೆ ಬಲಿಯಾಗಬೇಕಾಗುತ್ತದೆ ಎಂದು ಎಚ್ಚರಿಸಿದರು.

ಗುರುಕುಲ ಶಿಕ್ಷಣ ಪದ್ಧತಿ ವಿದ್ಯಾರ್ಥಿಗಳ ಭವಿಷ್ಯಕ್ಕೆ ಉತ್ತಮ ಬುನಾದಿ ನೀಡುತ್ತಿತ್ತು. ಪ್ರಸ್ತುತ ದಿನಗಳಿಗೂ ಗುರುಕುಲ ಪದ್ಧತಿ ಅನಿವಾರ್ಯವಾಗಿದೆ. ಮೊಬೈಲ್‌ಗಳ ಮೂಲಕ ಎಲ್ಲಾ ಮಾಹಿತಿ ಸಿಗುತ್ತದೆ. ಆದರೆ ಗುರುವಿನ ಮಾರ್ಗದರ್ಶನ ಮುಖ್ಯ. ಗುರುಗಳನ್ನು ಗೌರವಿಸಬೇಕು. ಅವರು ಹೇಳಿದ್ದನ್ನು ಪಾಲಿಸಬೇಕು ಎಂದು ಸಲಹೆ ನೀಡಿದರು.



ಎಂಜಿನಿಯರಿಂಗ್ ಕಾಲೇಜು ಐಐಟಿ ಕಾಲೇಜುಗಳಿಗೇನೂ ಕಡಿಮೆ ಇಲ್ಲ. ಆದರೆ ಇಲ್ಲಿ ಕೈಗಾರಿಕೋದ್ಯಮಿಗಳಿಗೆ ಅಗತ್ಯವಾದ ಶಿಕ್ಷಣದ ಕೊರತೆ ಇದೆ. ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಇದನ್ನು ನಿವಾರಿಸುತ್ತದೆ ಎಂದು ಹೇಳಿದರು.

ಭಾರತ ಆರ್ಥಿಕತೆಯಲ್ಲಿ ಉತ್ತಮ ಸ್ಥಾನದಲ್ಲಿದೆ. ಆತ್ಮನಿರ್ಭರ ಭಾರತ, ಮೇಕ್ ಇನ್ ಇಂಡಿಯಾದಂತಹ ಕ್ರಮಗಳು ಭಾರತವನ್ನು ಆರ್ಥಿಕಾಭಿವೃದ್ಧಿಯತ್ತ ಕೊಂಡೊಯ್ಯುತ್ತವೆ. ಜಪಾನ್ ದೇಶದ ಪ್ರಜೆಗಳು ಸಮಯಕ್ಕೆ ಹೆಚ್ಚಿನ ಆದ್ಯತೆ ನೀಡುವುದರಿಂದ ಜಪಾನ್ ಮುಂದುವರೆದ ದೇಶವಾಗುತ್ತಿದೆ. ಹಾಗೆಯೇ ಪ್ರತಿಯೊಬ್ಬರು ಸಮಯಕ್ಕೆ ಆದ್ಯತೆ ನೀಡಬೇಕು. ಶಿಸ್ತನ್ನು ಮೈಗೂಡಿಸಿಕೊಳ್ಳಬೇಕು ಎಂದು ಹೇಳಿದರು.

ಚಿಕ್ಕೋಡಿಯ ಕೆ.ಎಲ್.ಇ. ಇಂಜಿನಿಯರಿಂಗ್ ಕಾಲೇಜು ಪ್ರಾಂಶುಪಾಲ ಡಾ.ಪ್ರಸಾದ್ ಬಿ. ರಾಂಪುರೆ ಮಾತನಾಡಿ, ಪ್ರತಿ ವಿದ್ಯಾರ್ಥಿಯೂ ಒಂದೊಂದು ಸಸಿ ನೆಡುವ ಮೂಲಕ ಹವಮಾನ ವೈಪರೀತ್ಯದಿಂದ ಸಮಾಜವನ್ನು ರಕ್ಷಿಸುವಂತೆ ಕಿವಿ ಮಾತು ಹೇಳಿದರು.

ಯು.ಬಿ.ಡಿ.ಟಿ. ಇಂಜಿನಿಯರಿಂಗ್ ಕಾಲೇಜು ಪ್ರಾಚಾರ್ಯ ಡಾ.ಡಿ.ಪಿ. ನಾಗರಾಜಪ್ಪ ಅಧ್ಯಕ್ಷತೆ ವಹಿಸಿದ್ದರು. ವಿಟಿಯು ಅಕಾಡೆಮಿಕ್ ಸೆನೆಟ್ ಸದಸ್ಯರಾದ ಡಾ.ಟಿ. ಮಂಜುನಾಥ್, ಡಾ.ಅಬ್ದುಲ್ ಬುಡೇನ್ ಉಪಸ್ಥಿತರಿದ್ದರು.

ಡಾ.ಬಿ.ಎನ್. ವೀರಪ್ಪ ಅತಿಥಿಗಳನ್ನು ಸ್ವಾಗತಿಸಿದರು. ಕು.ಪ್ರೀತಿ, ಅಭಿಷೇಕ್ ನಿರೂಪಿಸಿದರು. ಕು.ಶ್ರೀನಿಧಿ ಪ್ರಾರ್ಥಿಸಿದರು.

## ಶ್ರೇಷ್ಠ ರಕ್ತದಾನಿಗಳಿಗೆ ಗೌರವ; ಅರ್ಜಿ ಆಹ್ವಾನ

ದಾವಣಗೆರೆ, ಮೇ 19- ಯಾವುದೇ ಪ್ರತಿಫಲವನ್ನು ಅಪೇಕ್ಷಿಸದೆ ರಕ್ತದಾನ ಮಾಡಿರುವ ದಾನಿಗಳನ್ನು ಗುರುತಿಸಿ, ಗೌರವಿಸಿ, ಪ್ರೋತ್ಸಾಹಿಸುವ ಕಾರ್ಯಕ್ರಮವನ್ನು ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಜಿಲ್ಲಾ ಶಾಖೆ ಹಾಗೂ ರಾಜ್ಯ ಶಾಖೆ ಹಮ್ಮಿಕೊಂಡಿದೆ ಕನಿಷ್ಠ 25 ಬಾರಿ ಮೇಲ್ಪಟ್ಟು ರಕ್ತದಾನ ಮಾಡಿರುವ ರಕ್ತದಾನಿಗಳನ್ನು ನಮ್ಮ ಜಿಲ್ಲೆಯಲ್ಲಿ ಗುರುತಿಸಬೇಕಾಗಿರುವು ದರಿಂದ ವಿಳಾಸ ಹಾಗೂ ಮೊಬೈಲ್ ಸಂಖ್ಯೆಗಳ ವಿವರವನ್ನು ಅರ್ಜಿ ನಮೂನೆಯಲ್ಲಿ ಭರ್ತಿ ಮಾಡಿ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಜಿಲ್ಲಾ ಶಾಖೆಗೆ ಮೇ 25ರ ಒಳಗೆ ತಲುಪುವಂತೆ ಕಳುಹಿಸಬೇಕು. ಆದರೆ ಈ ರಕ್ತದಾನಿ ಈ ಹಿಂದೆ ನಮ್ಮ ಸಂಸ್ಥೆಯ ರಾಜ್ಯ ಶಾಖೆಯಿಂದಾಗಲೀ ಅಥವಾ ಜಿಲ್ಲಾ ಶಾಖೆಯಿಂದಾಗಲೀ ಗೌರವಿಸಲ್ಪಟ್ಟವರಾಗಿರಬಾರದು ಆಯ್ಕೆಯಾದ ಶ್ರೇಷ್ಠ ಹತ್ತು ರಕ್ತದಾನಿಗಳನ್ನು ಜೂನ್ 14 ವಿಶ್ವ ರಕ್ತದಾನಿಗಳ ದಿನಾಚರಣೆಯಂದು ಗೌರವಿಸಲಾಗು ವುದು. ಹೆಚ್ಚಿನ ವಿವರಗಳಿಗೆ (994529915,) ಸಂಪರ್ಕಿಸಬಹುದು ಎಂದು ರೆಡ್ ಕ್ರಾಸ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆನಂದ ಜ್ಯೋತಿ ತಿಳಿಸಿದ್ದಾರೆ.

## ಮಲೇಬೆನ್ನೂರಿನಲ್ಲಿಂದು ಮೇರಿ ಲೈಫ್ ಮೇರಾ ಸ್ವಚ್ಛ ಷಹರ್ ಅಭಿಯಾನಕ್ಕೆ ಚಾಲನೆ

ಮಲೇಬೆನ್ನೂರಿನ ಪುರಸಭೆ ಸಭಾಂಗಣದಲ್ಲಿ ಇಂದು ಬೆಳಗ್ಗೆ 11 ಕ್ಕೆ ಸ್ವಚ್ಛ ಭಾರತ ಅಭಿಯಾನ 2.0 ಯೋಜನೆ ಅಡಿಯಲ್ಲಿ ಮೇರಿ ಲೈಫ್ ಮೇರಾ ಸ್ವಚ್ಛ ಷಹರ್ ಯೋಜನೆಯ ನನ್ನ ಲೈಫ್ ನನ್ನ ಸ್ವಚ್ಛ ನಗರ ಅಭಿಯಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಪುರಸಭೆ ವ್ಯವಸ್ಥಾಪಕ ಏಕನಾಥ್ ಮತ್ತು ಪರಿಸರ ಇಂಜಿನಿಯರ್ ಉಮೇಶ್ ತಿಳಿಸಿದ್ದಾರೆ.



## ಶ್ರೀ ಶನೇಶ್ವರ ಸ್ವಾಮಿಯ ಕುಂಭಮೇಳ

ದಾವಣಗೆರೆ ಕೆ.ಟಿ.ಜೆ. ನಗರದ ಎರಡನೇ ತಿರುವಿನಲ್ಲಿರುವ ಶ್ರೀ ಶನೇಶ್ವರ ಸ್ವಾಮಿಯ ಕುಂಭಮೇಳ ದೊಂದಿಗೆ ಮುಖ್ಯ ಬೀದಿಗಳಲ್ಲಿ ಶ್ರೀ ಸ್ವಾಮಿಯ ರಥೋತ್ಸವವು ಶುಕ್ರವಾರ ವಿಜೃಂಭಣೆಯಿಂದ ನೆರವೇರಿತು.

# ಈಜುಕೊಳದಲ್ಲಿ ಮುಳುಗಿ ಇಬ್ಬರು ಬಾಲಕರ ಸಾವು

## ಬಾಲಕರ ಸಾವಿಗೆ ಅಧಿಕಾರಿಗಳ ನಿರ್ಲಕ್ಷ್ಯತನವೇ ಕಾರಣ : ಎಂ.ಎನ್. ನಾಗರಾಜ್

ದಾವಣಗೆರೆ, ಮೇ 19- ನಗರದ ಡಿ. ದೇವರಾಜ ಅರಸು ಬಡಾವಣೆ ಬಿ ಬ್ಲಾಕ್‌ನಲ್ಲಿರುವ ಈಜುಕೊಳದಲ್ಲಿ ಈಜಾಡಲು ತೆರಳಿದ್ದ ಇಬ್ಬರು ಬಾಲಕರು ಮೃತಪಟ್ಟ ಘಟನೆ ಶುಕ್ರವಾರ ಸಂಜೆ ನಡೆದಿದೆ.

ಮೃತರನ್ನು ಸ್ಥಳೀಯ ಬೀಡಿ ಲೇಔಟ್‌ನ ಮುಬಾರಕ್ ಹಾಗೂ ಶಹಜುದ್ದೀನ್ ಎಂದು ಗುರುತಿಸಲಾಗಿದೆ. ಸುಮಾರು 14 ರಿಂದ 16 ವರ್ಷದ ವಯೋಮಾನದ ಇವರು ಈಜಾಡಲೆಂದು ತೆರಳಿದ್ದರು. ಈಜು ಬಾರದ ಹಿನ್ನೆಲೆಯಲ್ಲಿ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ ಎನ್ನಲಾಗಿದೆ. ಮೃತ ದೇಹಗಳ ಮಹಜರು ಮಾಡಲು ಜಿಲ್ಲಾ ಚಿಗಟೇರಿ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಗೆ ಕೊಂಡೊಯ್ಯಲಾಗಿದ್ದು, ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಕಳೆದ ಮಾರ್ಚ್ 26ರಂದು ಈಜುಕೊಳವನ್ನು ನವೀಕರಣಗೊಳಿಸಿ ಲೋಕಾರ್ಪಣೆ ಮಾಡಲಾಗಿದ್ದನ್ನು ಇಲ್ಲಿ ಸ್ಮರಿಸಬಹುದು.

**ಅಧಿಕಾರಿಗಳ ವರ್ತನೆ - ಖಂಡನೆ :** ಇಬ್ಬರು ಬಾಲಕರು ನೀರು ಪಾಲಾಗಿರುವ ಘಟನೆಗೆ ಅಧಿಕಾರಿಗಳ ನಿರ್ಲಕ್ಷ್ಯತನವೇ ಕಾರಣ ಎಂದು ಆರೋಪಿಸಿರುವ ಜಿಲ್ಲಾ ಜೆಡಿಎಸ್ ಹಿರಿಯ ಮುಖಂಡ ಎಂ.ಎನ್. ನಾಗರಾಜ್, ಅಧಿಕಾರಿಗಳ ವರ್ತನೆಯನ್ನು ಖಂಡಿಸಿದ್ದಾರೆ.

ಈ ಈಜುಕೊಳದಲ್ಲಿ ಈಜು ತರಬೇತಿ ನೀಡುವ ತರಬೇತುದಾರರು ಪರಿಣಿತರಾಗಿರಲಿಲ್ಲ. ಈ ಬಗ್ಗೆ ನೀಡಿದ್ದ ಗುತ್ತಿಗೆದಾರರ ಬಗ್ಗೆ ಮಾಹಿತಿ ನೀಡುವಂತೆ ಯುವಜನ ಮತ್ತು ಕ್ರೀಡಾ ಇಲಾಖೆಗೆ ತಾವು ಆರ್‌ಟಿಐ ಮೂಲಕ ಮನವಿ ಸಲ್ಲಿಸಿ ಒಂದು ತಿಂಗಳಾದರೂ ಈವರೆಗೂ ನೀಡಿಲ್ಲ ಎಂದು ನಾಗರಾಜ್ ದೂರಿದ್ದಾರೆ.

ಬಾಲಕರ ಸಾವಿಗೆ ಯುವಜನ ಮತ್ತು ಕ್ರೀಡಾ ಇಲಾಖೆ ಅಧಿಕಾರಿಗಳೇ ಕಾರಣರಾಗಿದ್ದು, ಈ ಬಗ್ಗೆ ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ನಾಗರಾಜ್ ಅವರು ಜಿಲ್ಲಾಡಳಿತವನ್ನು ಒತ್ತಾಯಿಸಿದ್ದಾರೆ.

## ನಗರದಲ್ಲಿ ನಾಳೆ ವ್ಯಾಸ್ಕುಲರ್ ಶಸ್ತ್ರಚಿಕಿತ್ಸೆ

ದಾವಣಗೆರೆ, ಮೇ 19- ನಗರದ ಆರೈಕೆ ಆಸ್ಪತ್ರೆಯಲ್ಲಿ ನಾಡಿದ್ದು ದಿನಾಂಕ 21ರ ಭಾನುವಾರ ಬೆಳಿಗ್ಗೆ 10 ರಿಂದ ಮಧ್ಯಾಹ್ನ 1ರವರೆಗೆ ವ್ಯಾಸ್ಕುಲರ್ ಶಸ್ತ್ರಚಿಕಿತ್ಸೆ ಸಮಾಲೋಚನೆ ನಡೆಯಲಿದೆ.

ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯ ವ್ಯಾಸ್ಕುಲರ್ ಶಸ್ತ್ರಚಿಕಿತ್ಸಾ ತಜ್ಞರಾದ ಡಾ. ವಿ. ರಾಜೇಂದ್ರ ಪ್ರಸಾದ್ ಸಮಾಲೋಚನೆ ನಡೆಸಲಿದ್ದಾರೆ.

ಉಬ್ಬಿರುವ ರಕ್ತನಾಳ, ಕೈ ಕಾಲುಗಳ ಊತ, ನೋವು, ಮಧುಮೇಹ, ವಾಸಿಯಾಗದ ಗಾಯಗಳು, ಗ್ಯಾಂಗ್ರಿನ್ ಇನ್ನೂ ಅನೇಕ ಸಮಸ್ಯೆಗಳ ಬಗ್ಗೆ ಸಮಾಲೋಚನೆ ಮಾಡಲು ಬಯಸುವವರು 8050 560580 ಈ ಸಂಖ್ಯೆಗೆ ಸಂಪರ್ಕಿಸಬಹುದು.

# ಆಂಜನೇಯಗೆ ಸಚಿವ ಸ್ಥಾನ ನೀಡಲು ಆಗ್ರಹ

ದಾವಣಗೆರೆ, ಮೇ 19 - ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡ ಹೆಚ್. ಆಂಜನೇಯ ಅವರಿಗೆ ಸಚಿವ ಸಂಪುಟದಲ್ಲಿ ಸ್ಥಾನ ಕಲ್ಪಿಸಬೇಕೆಂದು ದಲಿತ ಸಂಘಟನೆಗಳ ಮಹಾ ಒಕ್ಕೂಟ ಒತ್ತಾಯಿಸಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಒಕ್ಕೂಟದ ಮುಖಂಡರಾದ ಹೆಚ್. ಮಲ್ಲೇಶ್, ಆಂಜನೇಯ ಅವರು ಮಾದಿಗ ಸಮುದಾಯದ ಶಕ್ತಿ. ಅವರು ಚುನಾವಣೆಯಲ್ಲಿ ಸೋತಿದ್ದರೂ ಸಹ, ಪರಿಷತ್‌ನಲ್ಲಿ ಸ್ಥಾನ ಕಲ್ಪಿಸಿ ಸಚಿವ ಸ್ಥಾನ ನೀಡಬೇಕು ಎಂದು ಒತ್ತಾಯಿಸಿದರು.

ಪರಿಶಿಷ್ಟರಲ್ಲಿ ಎಡ ಹಾಗೂ ಬಲ ಸಮುದಾಯಗಳಿರುವುದು ವಾಸ್ತವ. ಒಂದು ಬಣಕ್ಕೆ ಪ್ರಾಮುಖ್ಯತೆ ನೀಡಿ, ಮತ್ತೊಂದಕ್ಕೆ ನಿರಾಕರಿಸಬಾರದು ಎಂದವರು ಹೇಳಿದರು.

ಆಂಜನೇಯ ಅವರು ಈ ಹಿಂದೆ ಸಮಾಜ ಕಲ್ಯಾಣ ಸಚಿವರಾಗಿದ್ದಾಗ ಪರಿಶಿಷ್ಟ ಸಮುದಾಯಕ್ಕೆ 86 ಸಾವಿರ ಕೋಟಿ ರೂ.ಗಳ ವೆಚ್ಚ ಮಾಡಿದ್ದಾರೆ. ಈ ರೀತಿಯ ಸಾಧನೆ ಹಿಂದೆಂದೂ ಆಗಿರಲಿಲ್ಲ. ಎಸ್‌ಸಿಪಿ - ಟಿಎಸ್‌ಪಿಗೆ ಕಾಯ್ದೆ ಸ್ವರೂಪ ನೀಡಿದ ಆಂಜನೇಯ ಅವರು ಮತ್ತೆ ಸಚಿವರಾಗಬೇಕು ಎಂದು ಮುಖಂಡರಾದ ಹೆಗ್ಗೆರೆ ರಂಗಪ್ಪ ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಕುಂದವಾಡ ಮಂಜುನಾಥ್, ಕುಕ್ಕುವಾಡ ಮಲ್ಲೇಶ್, ಟಿ. ಬಸವರಾಜ್, ಕಣ್ಣಾಳ್ ಅಂಜನಪ್ಪ, ಅಳಗವಾಡಿ ನಿಂಗರಾಜ್, ಗುಮ್ಮನೂರು ರಾಮಚಂದ್ರ ಮತ್ತಿತರರು ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ನಡೆಯಬೇಕಿದ್ದ ರೈತ ಸಂಘದ ಪ್ರತಿಭಟನೆ ಹಿಂದಕ್ಕೆ

ದಾವಣಗೆರೆ, ಮೇ 19 - ಬ್ಯಾಂಕ್ ಸಿಬ್ಬಂದಿಗಳ ಅನುಚಿತ ವರ್ತನೆ ಖಂಡಿಸಿ ನಾಳೆ ದಿನಾಂಕ 20 ರಂದು ಕೊಡಗನೂರು ಕರ್ನಾಟಕ ಪ್ರಗತಿ ಗ್ರಾಮೀಣ ಬ್ಯಾಂಕಿನ ಮುಂದೆ ಹಮ್ಮಿಕೊಳ್ಳಬೇಕಾಗಿದ್ದ ಪ್ರತಿಭಟನೆಯನ್ನು ಹಿಂಪಡೆದಿರುವುದಾಗಿ ಕರ್ನಾಟಕ ರಾಜ್ಯ ರೈತ ಸಂಘ ತಿಳಿಸಿದೆ. ಬ್ಯಾಂಕಿನ ಅಧಿಕಾರಿಗಳು ರೈತರ ಸಮಸ್ಯೆ ಬಗೆಹರಿಸುವುದಾಗಿ ಭರವಸೆ ನೀಡಿದ ಹಿನ್ನೆಲೆಯಲ್ಲಿ ಪ್ರತಿಭಟನೆ ಹಿಂಪಡೆಯುತ್ತಿರುವುದಾಗಿ ಸಂಘದ ಪ್ರಧಾನ ಕಾರ್ಯದರ್ಶಿ ಈಚಘಟ್ಟದ ಎ.ಆರ್. ಕರಿಬಸಪ್ಪ ತಿಳಿಸಿದ್ದಾರೆ.

# ಡಾ. ಟಿ.ಹೆಚ್. ನರೇಂದ್ರ ನಾಯಕ್ ಸೇವಾ ನಿವೃತ್ತಿ

ದಾವಣಗೆರೆ, ಮೇ 19- ಶಿವಮೊಗ್ಗದ ಕಮಲಾ ನೆಹರೂ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಸಮಾಜಶಾಸ್ತ್ರ ಉಪನ್ಯಾಸಕ ಡಾ. ಟಿ.ಹೆಚ್. ನರೇಂದ್ರ ನಾಯಕ್ ಅವರು ಸೇವೆಯಿಂದ ನಿವೃತ್ತರಾಗಿದ್ದಾರೆ.



ಕಾಲೇಜಿನ ಸಭಾಂಗಣದಲ್ಲಿ ನರೇಂದ್ರ ನಾಯಕ್ ಅವರಿಗೆ ಹೃದಯಸ್ಪರ್ಶಿ ಬೀಳ್ಕೊಡುಗೆ ಸಮಾರಂಭ ಏರ್ಪಡಿಸಲಾಗಿತ್ತು.

ನರೇಂದ್ರ ನಾಯಕ್ ಅವರ ಕುರಿತು ಗೌರವ ನುಡಿಗಳನ್ನಾಡಿದ ಪ್ರಥಮ ಬಿಎ ವಿದ್ಯಾರ್ಥಿನಿ ಕು. ಈಶ್ವರಿ, ನರೇಂದ್ರ ನಾಯಕ್ ಅವರು ವಿದ್ಯಾರ್ಥಿಗಳ ಮೇಲಿಟ್ಟಿರುವ ಪ್ರೀತಿ, ವಿಶ್ವಾಸ, ಕಾಳಜಿ ಅವರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿದೆ ಎಂದು ಶ್ಲಾಘಿಸಿದರು. ಅವರ ವೃತ್ತಿ ಜೀವನದಲ್ಲಿ ವಿದ್ಯಾ ತೋಟವನ್ನು ಬೆಳೆಸಿದ್ದಾರೆ. ಪ್ರೀತಿ, ಜ್ಞಾನ, ಮಾರ್ಗದರ್ಶನವನ್ನು ನಮ್ಮಂತಹ ವಿದ್ಯಾರ್ಥಿಗಳಿಗೆ ಧಾರೆ ಎರೆದು ಹೆಮ್ಮರವಾಗಿ ಬೆಳೆಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ನರೇಂದ್ರ ನಾಯಕ್ ಅವರು ರಚಿಸಿ, ಸುಪ್ವಿ ಪ್ರಕಾಶನ ಹೊರ ತಂದಿರುವ 'ಅರಿವು -60' ಕೃತಿಯನ್ನು ಇದೇ ಸಂದರ್ಭದಲ್ಲಿ ಬಿಡುಗಡೆ ಮಾಡಲಾಯಿತು. ಡಾ. ನರೇಂದ್ರ ನಾಯಕ್ ದಂಪತಿಯನ್ನು ಸಮಾರಂಭದಲ್ಲಿ ಸನ್ಮಾನಿಸಿ, ಗೌರವಿಸಲಾಯಿತು.

ಡಾ. ನರೇಂದ್ರ ನಾಯಕ್ ಅವರು ದಾವಣಗೆರೆ ಎಆರ್‌ಜಿ ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಸಮಾಜಶಾಸ್ತ್ರ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ್ದರು.

ಪ್ರಾಚಾರ್ಯರಾದ ಡಾ. ಹೆಚ್.ಎಸ್. ನಾಗಭೂಷಣ, ಡಾ. ಜೆ.ಎಲ್. ಪದ್ಮನಾಭ್, ಪ್ರೊ. ಸತ್ಯನಾರಾಯಣ, ಪ್ರೊ. ಕಿರಣ್ ದೇಸಾಯಿ, ಪ್ರೊ. ಓಂಕಾರಪ್ಪ, ಡಾ. ಆರ್.ಎಂ. ಜಗದೀಶ್, ಪ್ರೊ. ಶೇಖರ್, ಡಾ. ಶಂಕರ್, ಡಾ. ಕೆ.ಟಿ. ಪಾರ್ವತಮ್ಮ ಮತ್ತಿತರರು ಬೀಳ್ಕೊಡುಗೆ ಸಮಾರಂಭದಲ್ಲಿ ಉಪಸ್ಥಿತರಿದ್ದರು.

## ನ್ಯಾಮತಿ : ಇಂದು ಗ್ರಾಹಕರ ಸಭೆ

ಬೆವಿಕಂ ನ್ಯಾಮತಿ ಉಪವಿಭಾಗ ಕಛೇರಿಯಲ್ಲಿ ಇಂದು ಮಧ್ಯಾಹ್ನ 3 ರಿಂದ ಸಂಜೆ 5.30 ರವರೆಗೆ ಗ್ರಾಹಕರ ಸಂವಾದ ಸಭೆ ನಡೆಯಲಿದ್ದು, ಗ್ರಾಹಕರು ಸಭೆಯಲ್ಲಿ ವಿದ್ಯುತ್ ವಿಷಯವಾಗಿ ಕೊಂದು-ಕೊರತೆಗಳ ಬಗ್ಗೆ ಚರ್ಚಿಸಲು ಸಭೆಗೆ ಹಾಜರಾಗಲು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಶ್ರೀನಿವಾಸ್ ಬಿ.ಕೆ. ತಿಳಿಸಿದ್ದಾರೆ.

# ವಿಶ್ವಕರ್ಮ ಸಮಾಜದಿಂದ ಸಾಮೂಹಿಕ ವಿವಾಹ, ಉಪನಯನ

ದಾವಣಗೆರೆ, ಮೇ 19- ವಿಶ್ವಕರ್ಮ ಸಮಾಜ ಸಂಘ ಹಾಗೂ ಜಿಲ್ಲೆಯ ವಿಶ್ವಕರ್ಮ ಸಮಾಜದ ಎಲ್ಲಾ ಸಂಘ-ಸಂಸ್ಥೆಗಳ ಸಹಯೋಗದಲ್ಲಿ 40 ನೇ ವರ್ಷದ ಸಾಮೂಹಿಕ ಉಪನಯನ ಮತ್ತು ವಿವಾಹ ಮಹೋತ್ಸವ ಹಾಗೂ ಧಾರ್ಮಿಕ ಸಭಾ ಕಾರ್ಯಕ್ರಮ ನಗರದ ಕಾಳಿಕಾಂಬ ವಿಶ್ವಕರ್ಮ ಕಲ್ಯಾಣ ಮಂಟಪದಲ್ಲಿ ನಾಡಿದ್ದು ದಿನಾಂಕ 21 ರ ಭಾನುವಾರ ಸಂಘದ ಪ್ರಧಾನ ಕಾರ್ಯದರ್ಶಿ ವಿ.ಎಂ. ಕೊಟ್ರೇಶಾಚಾರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕಾರ್ಯಕ್ರಮದ ನಿಮಿತ್ತ ನಾಳೆ ದಿನಾಂಕ 20 ರ ಶನಿವಾರ ಸಂಜೆ 5.30 ಕ್ಕೆ ಕಲ್ಯಾಣ ಮಂಟಪಕ್ಕೆ ವಧು-ವರರು, ವಟುಗಳು ಆಗಮಿಸಲಿದ್ದಾರೆ. ದಿನಾಂಕ 21ರ ಬೆಳಿಗ್ಗೆ 4.12 ರಿಂದ 5.10 ರವರೆಗೆ ಯಜ್ಞೋಪವೀತ ಧಾರಣೆ ಮತ್ತು ಬ್ರಹ್ಮೋಪದೇಶ, ಬೆಳಿಗ್ಗೆ 8.30 ರಿಂದ 9.12 ರವರೆಗೆ ಸಾಮೂಹಿಕ ವಿವಾಹಗಳು ನಡೆಯಲಿವೆ ಎಂದರು.

21 ರ ಬೆಳಿಗ್ಗೆ 11 ಕ್ಕೆ ನಡೆಯುವ ಧಾರ್ಮಿಕ ಸಭಾ ಕಾರ್ಯಕ್ರಮದಲ್ಲಿ ಅಂತರವಳ್ಳಿ ಶಾಖಾ ಮಠದ ಆನಗೋಡು ಶ್ರೀ ಭಾಸ್ಕರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ವಿಶ್ವಕರ್ಮ ಸಮಾಜ ಸಂಘದ ಅಧ್ಯಕ್ಷ ಬಸಾಪುರದ ಬಿ. ನಾಗೇಂದ್ರಚಾರ್ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಜಿಲ್ಲಾಧಿಕಾರಿ ಶಿವಾನಂದ ಕಾಪಶಿ, ಮಹಾನಗರ ಪಾಲಿಕೆ ಮೇಯರ್ ವಿನಾಯಕ ಪೈಲ್ವಾನ್, ಜವಳಿ ವರ್ತಕ ಬಿ.ಸಿ. ಉಮಾಪತಿ, ದಾವಣಗೆರೆ-ಹರಿಹರ ಅರ್ಬನ್ ಬ್ಯಾಂಕ್ ಅಧ್ಯಕ್ಷ ಎನ್.ಎ. ಮುರುಗೇಶ್, ಸಂಘದ ಗೌರವಾಧ್ಯಕ್ಷ ಬಿ.ಎಲ್. ಸೀತಾರಾಮಚಾರ್, ವಿಶ್ವಕರ್ಮ ಕ್ರೆಡಿಟ್ ಕೋ-ಆಪ್ ಸೊಸೈಟಿ ಅಧ್ಯಕ್ಷ ಬಿ.ವಿ. ಶಿವಾನಂದ ಸೇರಿದಂತೆ ಇತರರು ಭಾಗವಹಿಸಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ವಿಶ್ವಕರ್ಮ ಸಮಾಜ ಸಂಘದ ಪದಾಧಿಕಾರಿಗಳಾದ ಬಸಾಪುರದ ಬಿ. ನಾಗೇಂದ್ರಚಾರ್, ಬೇತೂರು ಮಂಜುನಾಥಾಚಾರ್, ಬಿ. ಸಿದ್ಧಾಚಾರ್, ಜಿ.ಬಿ. ಬ್ರಹ್ಮಾಚಾರ್ ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ತೊಗಟವೀರ ಸಮುದಾಯದ ರಜತ ಮಹೋತ್ಸವ

ಶ್ರೀ ತೊಗಟವೀರ ಸಮುದಾಯ ಭವನದ ರಜತ ಮಹೋತ್ಸವ ಸಮಾರಂಭವು ತಪಸೀಹಳ್ಳಿ ಶ್ರೀ ದಿವ್ಯ ಜ್ಞಾನಾನಂದಗಿರಿ ಸ್ವಾಮೀಜಿ ಸಾನ್ನಿಧ್ಯದಲ್ಲಿ ಇಂದು ಬೆಳಿಗ್ಗೆ 10.45 ಕ್ಕೆ ತೊಗಟವೀರ ಸಮುದಾಯ ಭವನದಲ್ಲಿ ನಡೆಯಲಿದೆ ಎಂದು ಶ್ರೀ ತೊಗಟವೀರ ಸಮಾಜ ಸೇವಾ ಸಮಿತಿ ಟ್ರಸ್ಟ್ ತಿಳಿಸಿದೆ.

### ಓದುಗರ ಪತ್ರಗಳು

## ಓ ದೇವರೇ.. ನೀನಿದ್ದರೆ..!

**ಮಾನ್ಯರೇ,**

ಸ್ವತಂತ್ರ ಸರ್ಕಾರ ಬಂದರೆ ಸಂವಿಧಾನದ ಆಶಯದಂತೆ ಸ್ವಾತಂತ್ರ್ಯ, ಸಹೋದರತೆ, ಸಮಾನತೆ, ಸಾಮಾಜಿಕ ನ್ಯಾಯ, ನಿಯಮಗಳನ್ನು ನಿಯತ್ತಿನಿಂದ ಅನುಷ್ಠಾನ ಮಾಡುವರೇ...?

ಅತಂತ್ರ ಸರ್ಕಾರ ಬಂದರೆ, ಅಡ್ನಾಡಿ, ಅರುಕಾಮುರಕ, ಅಯೋಮಯ, ಅಲ್ಲೋಲ ಕಲ್ಲೋಲ ಖಾತ್ರಿಯೇ...?

ಆಗ ರಾಜನೀತಿ ಇಲ್ಲದ ರಾಜಕಾರಣ (politicking no statesmanship) ರೆಸಾರ್ಟ್ ರಾಜಕೀಯ, ಅಯಾ ರಾಮ್, ಗಯಾ ರಾಮ್, ಕುದುರೆ ವ್ಯಾಪಾರ, ಬಾಂಬೆ ಬಾಯ್ಸ್... ಕಟ್ಟಿಟ್ಟ ಬುತ್ತಿಯೇ.....?

ಓ ದೇವರೇ..! ನೀನಿದ್ದರೆ ಬಡ ಬಗ್ಗರಿಗೆ, ದೀನದಲಿತರಿಗೆ ನೀರು, ನಿರುದ್ಯೋಗ ನಿವಾರಣೆ, ಸಾಮರಸ್ಯ ಸೌಹಾರ್ದ, ಪರಿಸರ ರಕ್ಷಣೆ ಇತ್ಯಾದಿ ಅನುಕೂಲ ಕಲ್ಪಿಸುವ ಸಹೃದಯದ ಸಜ್ಜನರಿಗೆ ಆಡಳಿತ ದಂಡ ನೀಡು.

ಬುದ್ಧ, ಬಸವಣ್ಣ, ಗಾಂಧೀಜಿ, ಅಂಬೇಡ್ಕರ್‌ರ ಮಂತ್ರಿಗಿರಿ ನಡೆದು, ಈಗೊಮ್ಮೆ ಕಲ್ಯಾಣ ಕರ್ನಾಟಕ ಮತ್ತು ಗಾಂಧೀಜಿಯ ಕನಸಿನ ರಾಮರಾಜ್ಯದ ನಿರ್ಮಾಣದ ಪವಾಡ ನಡೆದೀತೆ...?.

**ಶಿವನಕೆರೆ ಬಸವಲಿಂಗಪ್ಪ, ದಾವಣಗೆರೆ.**

# ರುದ್ರಪ್ಪ ಲಮಾಣಿಗೆ ಸಚಿವ ಸ್ಥಾನ ನೀಡಲು ಒತ್ತಾಯ

ದಾವಣಗೆರೆ, ಮೇ 19 - ಬಂಜಾರ ಸಮುದಾಯದಿಂದ ಕಾಂಗ್ರೆಸ್‌ನ ಏಕೈಕ ಶಾಸಕರಾಗಿ ಆಯ್ಕೆಯಾಗಿರುವ ಹಾವೇರಿಯ ರುದ್ರಪ್ಪ ಲಮಾಣಿ ಅವರಿಗೆ ಸಚಿವ ಸ್ಥಾನ ನೀಡುವಂತೆ ದಾವಣಗೆರೆ ಜಿಲ್ಲಾ ಬಂಜಾರ ಸೇವಾ ಸಂಘ ಒತ್ತಾಯಿಸಿದೆ. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಂಘದ ಕಾರ್ಯದರ್ಶಿ ಕೆ.ಆರ್. ಮಲ್ಲೇಶನಾಯ್ಕ, ಬಿಜೆಪಿ ಸರ್ಕಾರ ಇದ್ದಾಗ ಅವೈಜ್ಞಾನಿಕ ಮೀಸಲಾತಿ ಮೂಲಕ ಬಂಜಾರ ಸಮುದಾಯಕ್ಕೆ ಅನ್ಯಾಯ ಮಾಡಲಾಗಿತ್ತು. ಇದರ ವಿರುದ್ಧ ಬಂಜಾರ ಸಮುದಾಯ ತೀವ್ರ ಹೋರಾಟ ನಡೆಸಿತ್ತು. ಸಮುದಾಯ ಈ ಬಾರಿ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲಿಸಿತ್ತು ಎಂದರು.

ಈ ಎಲ್ಲಾ ಹಿನ್ನೆಲೆಯಲ್ಲಿ ಲಮಾಣಿ ಅವರಿಗೆ ಸಂಪುಟ ದರ್ಜೆ ಸಚಿವರಾಗಿ ನೇಮಿಸಬೇಕು. ಅಲ್ಲದೇ, ಬಂಜಾರ ಸಮುದಾಯಕ್ಕೆ ಧಕ್ಕೆಯಾಗುವ ಯಾವುದೇ ನಿರ್ಧಾರಕ್ಕೆ ಕಾಂಗ್ರೆಸ್ ಮುಂದಾಗಬಾರದು ಎಂದು ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಅರುಣ್ ನಾಯಕ್, ರವಿ ನಾಯಕ್, ಶೀತಲ್ ನಾಯಕ್, ಸಂತೋಷ್ ನಾಯಕ್ ಮತ್ತಿತರರು ಉಪಸ್ಥಿತರಿದ್ದರು.



## ಪಂಚ ದೇವಸ್ಥಾನಗಳ ಕ್ಷೇತ್ರದಲ್ಲಿ ಶನೇಶ್ವರ ಸ್ವಾಮಿ ಜಯಂತ್ಯೋತ್ಸವ

ದಾವಣಗೆರೆಯ ಜಿಲ್ಲಾಧಿಕಾರಿ ಕಚೇರಿ ಬಳಿ ಇರುವ ಪಿ.ಬಿ. ರಸ್ತೆಯ ಪಂಚ ದೇವಸ್ಥಾನಗಳ ಮಹಾಕ್ಷೇತ್ರದಲ್ಲಿ ಶ್ರೀ ಶನೇಶ್ವರ ಸ್ವಾಮಿ ಜಯಂತ್ಯೋತ್ಸವವು ಶುಕ್ರವಾರ ವಿಜೃಂಭಣೆಯಿಂದ ಜರುಗಿತು. ಬೆಳಿಗ್ಗೆ ಶ್ರೀ ಸ್ವಾಮಿಗೆ ತೈಲಾಭಿಷೇಕ, ಪಂಚಾಮೃತಾಭಿಷೇಕ, ರುದ್ರಾಭಿಷೇಕ ಸೇರಿದಂತೆ, ವಿಶೇಷ ಅಲಂಕಾರ ನಡೆಯಿತು. ನಂತರ ತೊಟ್ಟಿಲೋತ್ಸವ ಕಾರ್ಯಕ್ರಮ, ನವಗ್ರಹ ಹೋಮ, ತೀರ್ಥ ಪ್ರಸಾದ ವಿನಿಯೋಗ ಜರುಗಿತು.

## ಬ್ಯೂಟಿ ಪಾರ್ಲರ್ ತರಬೇತಿ

ದಾವಣಗೆರೆ, ಮೇ 19- ಕೆನರಾ ಬ್ಯಾಂಕ್ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆ (ತೋಳಹುಣಸೆ) ಹಾಗೂ ಜಿಲ್ಲಾ ಪಂಚಾಯತ್ ಇವರ ಸಂಯುಕ್ತಾಶ್ರಯದಲ್ಲಿ ಮಹಿಳೆಯರಿಗೆ 30 ದಿನಗಳ ಬ್ಯೂಟಿಪಾರ್ಲರ್ ಮ್ಯಾನೇಜ್‌ಮೆಂಟ್ ತರಬೇತಿ ಇದೇ ದಿನಾಂಕ 22 ರಿಂದ ಆರಂಭಗೊಳ್ಳಲಿದೆ. ತರಬೇತಿ ಸಂಪೂರ್ಣ ಉಚಿತವಾಗಿದ್ದು, ಆಸಕ್ತರು ನಾಳೆ ದಿನಾಂಕ 20 ರೊಳಗಾಗಿ ಮೊಬೈಲ್ ಸಂಖ್ಯೆ : 79751 39332 ಅಥವಾ 70199 80484 ಅಥವಾ 99641 11314 ನ್ನು ಸಂಪರ್ಕಿಸಬಹುದು.


**RS ENTERPRISES**

Near New DC Office Karur Industrial Area Davangere.

Job Requirement for Accountant 2 experienced in Accounts and GST Filing, Tally. Male or Female

Job Requirement for Telecalling and Kannada Typing Minimum 2 years Experience only for female.

**Send Resume or whatsapp & Contact No. : 78999 27530**

**ಬೇಕಾಗಿದ್ದಾರೆ**

ಭಾರತ ಸರ್ಕಾರದಿಂದ ನಡೆಸುತ್ತಿರುವ ವಿವಿಧ ಯೋಜನೆಗಳಲ್ಲಿ ಕಾರ್ಯನಿರ್ವಹಿಸಲು ನಮ್ಮ ಸಂಸ್ಥೆಗೆ ಈ ಕೆಳಕಂಡ ಸಿಬ್ಬಂದಿಗಳು ಬೇಕಾಗಿದ್ದಾರೆ.

| ಹುದ್ದೆ | ಅರ್ಹತೆ | ವಯೋಮಿತಿ | ಹುದ್ದೆಗಳ ಸಂಖ್ಯೆ |
|---|---|---|---|
| ಅಕೌಂಟೆಂಟ್ | ಯಾವುದೇ ಪದವಿ, Tally, ಅಕೌಂಟ್ಸ್‌ನಲ್ಲಿ ಅನುಭವ | 21-50 ವರ್ಷ | 10 |
| ಸಮಾಲೋಚಕರು (ಕೌನ್ಸಿಲರ್‌ಗಳು) | ಯಾವುದೇ ಪದವಿ (ಸಮಾಲೋಚಕರ ಅನುಭವ ಹೊಂದಿರಬೇಕು) | 21-50 ವರ್ಷ | 20 |

ಆಸಕ್ತ ಅಭ್ಯರ್ಥಿಗಳು ತಮ್ಮ ಮೂಲ ದಾಖಲೆಗಳೊಂದಿಗೆ ದಿನಾಂಕ 21-05-2023 ಭಾನುವಾರ ಬೆಳಗ್ಗೆ 10.30 ಗಂಟೆಗೆ ನಡೆಯುವ ನೇರ ಸಂದರ್ಶನದಲ್ಲಿ ಪಾಲ್ಗೊಳ್ಳಬಹುದು.


ಸಂದರ್ಶನ ನಡೆಯುವ ಸ್ಥಳ :

**ದಾವಣಗೆರೆ ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಸೌಹಾರ್ದ ಸಹಕಾರಿ ಸಂಘ ನಿ.,**

#1634/6, ಕೆಇಬಿ ಆಫೀಸ್ ಎದುರು, ವಿದ್ಯಾರ್ಥಿ ಭವನ, ಹದಡಿ ರಸ್ತೆ, ದಾವಣಗೆರೆ-577002.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : +91 99455 99996, +91 87927 09401

# ಹೆಸರಾಂತ ನೇತ್ರತಜ್ಞ ಡಾ. ಕೆ.ಭುಜಂಗ ಶೆಟ್ಟಿ ನಿಧನ



ಬೆಂಗಳೂರು, ಮೇ 19- ನಾರಾಯಣ ನೇತ್ರಾಲಯದ ಅಧ್ಯಕ್ಷ ಡಾ.ಕೆ. ಭುಜಂಗ ಶೆಟ್ಟಿ (69) ಅವರು ಶುಕ್ರವಾರ ಸಂಜೆ ಹೃದಯಾಘಾತದಿಂದ ನಿಧನರಾಗಿದ್ದಾರೆ.

ಆಸ್ಪತ್ರೆಯಿಂದ ಮನೆಗೆ ಬಂದ ಮೇಲೆ, ಜಿಮ್‌ನಲ್ಲಿ ವ್ಯಾಯಾಮ ಮಾಡುವ ಸಂದರ್ಭದಲ್ಲಿ ಏಕಾಏಕಿ ಕುಸಿದು ಬಿದ್ದಿದ್ದು, ಅವರನ್ನು ಅವರ ನಿವಾಸದ ಹತ್ತಿರವಿರುವ ಯಶವಂತಪುರದ ಕೊಲಂಬಿಯಾ ಏಷಿಯಾ ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೇ ಕೊನೆಯುಸಿರೆಳೆದಿದ್ದಾರೆ ಎಂದು ಆಸ್ಪತ್ರೆಯ ವೈದ್ಯರು ತಿಳಿಸಿದ್ದಾರೆ.

ಭುಜಂಗ ಶೆಟ್ಟಿ ಅವರು ವರನಟ ಡಾ. ರಾಜ್‌ಕುಮಾರ್ ಮತ್ತು ಪುನೀತ್ ರಾಜ್‌ಕುಮಾರ್ ನಿಧನದ ಬಳಿಕ ಅವರ ನೇತ್ರಗಳನ್ನು ಶಸ್ತ್ರಚಿಕಿತ್ಸೆ ಮೂಲಕ ಅಂಧರಿಗೆ ನೀಡಿ, ಅವರ ಬಾಳಿಗೆ ಬೆಳಕು ತಂದಿದ್ದರು. ಡಾ. ರಾಜಕುಮಾರ್ ಅವರ ಹೆಸರಿನಲ್ಲಿ ಐ ಬ್ಯಾಂಕ್ ತೆರೆದು ನೇತ್ರದಾನದ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುತ್ತಿದ್ದರು. ಇದು ಅವರ ಸಾಮಾಜಿಕ ಕಳಕಳಿಯಾಗಿತ್ತು.

ಡಾ. ಕೆ.ಭುಜಂಗ ಶೆಟ್ಟಿ ನಿಧನಕ್ಕೆ ಹಲವಾರು ರಾಜಕೀಯ ಗಣ್ಯರಾದ ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಬಸವರಾಜ ಬೊಮ್ಮಾಯಿ ಹಾಗೂ ಮತ್ತಿತರರು ಸಂತಾಪ ಸೂಚಿಸಿದ್ದಾರೆ.

# ಮರು ಮೌಲ್ಯಮಾಪನದಲ್ಲಿ ದವನ್ ಕಾಲೇಜಿನ ಲಿಖಿತ್ ಜಿಲ್ಲೆಗೆ ದ್ವಿತೀಯ



ದಾವಣಗೆರೆ, ಮೇ 19 - ನಗರದ ದವನ್ ಕಾಲೇಜಿನ ವಿದ್ಯಾರ್ಥಿ ಎಂ. ಆರ್. ಲಿಖಿತ್ ದ್ವಿತಿಯ ಪಿಯುಸಿ ವಾಣಿಜ್ಯ ವಿಭಾಗದಲ್ಲಿ 588 ಅಂಕಗೊಂದಿಗೆ ಶೇ. 98 ಪಡೆದು ಜಿಲ್ಲೆಗೆ ದ್ವಿತೀಯ ಸ್ಥಾನ ಪಡೆದಿದ್ದಾರೆ.

ಸ್ಥಳೀಯ ಶ್ರೀಮತಿ ಸುಧಾ ಮತ್ತು ರಮೇಶ್ ದಂಪತಿ ಪುತ್ರ ಲಿಖಿತ್, ಮರು ಮೌಲ್ಯಮಾಪನದಲ್ಲಿ ಅರ್ಥಶಾಸ್ತ್ರ ಮತ್ತು ಲೆಕ್ಕಶಾಸ್ತ್ರ ಎರಡೂ ವಿಷಯಗಳಲ್ಲಿ 100 ಕ್ಕೆ 100 ಅಂಕಗಳನ್ನು ಪಡೆದಿದ್ದಾರೆ. ಲಿಖಿತ್ ಅವರನ್ನು ಸಂಸ್ಥೆಯ ಕಾರ್ಯದರ್ಶಿ ವೀರೇಶ್ ಪಟೇಲ್, ಜಂಟಿ ಕಾರ್ಯದರ್ಶಿ ಡಾ. ಜಿ.ಎಸ್. ಅಂಜು, ಶೈಕ್ಷಣಿಕ ಸಲಹೆಗಾರರಾದ ಪ್ರೊ. ಬಾತಿ ಬಸವರಾಜ್, ನಿರ್ದೇಶಕ ಹರ್ಷರಾಜ್ ಎ ಗುಜ್ಜಾರ್, ಪ್ರಾಚಾರ್ಯರಾದ ಹೆಚ್.ಸಿ. ಅಶ್ವಿನಿ ಅಭಿನಂದಿಸಿದ್ದಾರೆ.

# ನಾಡಿದ್ದು ಬಿಡಾಡಿ ಹಂದಿ ಮಾಲೀಕರ ಸಭೆ

ದಾವಣಗೆರೆ, ಮೇ. 19 - ಬಿಡಾಡಿ ಹಂದಿಗಳ ಹಾವಳಿ ನಿಯಂತ್ರಣ ಕುರಿತು ದಿನಾಂಕ 22ರ ಬೆಳಿಗ್ಗೆ 11ಕ್ಕೆ ಪಾಲಿಕೆಯ ಕೌನ್ಸಿಲ್ ಸಭಾಂಗಣದಲ್ಲಿ ಬಿಡಾಡಿ ಹಂದಿ ಮಾಲೀಕರ ಸಭೆ ಕರೆಯಲಾಗಿದೆ.

















